# 6

# ಕ್ರಿಸ್ತನು ಆಗಮಿಸಿದ ಲೋಕ

ಆದಿಯಲ್ಲಿ, ಸುವಾರ್ತೆಗಳನ್ನು ಓದಿದಂತ ಜನರು, ಯೇಸು ಆಗಮಿಸಿದ ಲೋಕದ ಬಗ್ಗೆ ಅರಿತವರಾಗಿದ್ದರು. ಆದರೆ ಪ್ರಚಲಿತ ಕಾಲದವರಾದ ನಮಗೆ ಅದರ ಪರಿಚಯವಿರುವದಿಲ್ಲ. ಕ್ರಿಸ್ತನ ದಿನಗಳಲಿದ್ದ ಪಾಲೆಸ್ತೀನ ದೇಶದ ಬಗ್ಗೆ B. S. ಡೀನ್‌ರವರು, "ಅಬ್ರಹಾಮನು ಶೇಕೆಮಿನಲ್ಲಿ ತನ್ನ ಗುಡಾರವನ್ನು ಹಾಕಿದ ಮೊದಲನೆಯ ದಿನದಲ್ಲಿ ಇದ್ದ ಸೌಂದರ್ಯವನ್ನೇ, ಪಾಲೆಸ್ತೇನ್ ದೇಶವು ಹೊಂದಿತ್ತು ಎಂದು ಹೇಳಿರುವರು."[1] ಆದರೆ ಈಗ ಎಲ್ಲವೂ ಬದಲಾಗಿದೆ. ಹಳೆ ಒಡಂಬಡಿಕೆ ಕಾಲದಿಂದ ಬದಲಾದ ಸಂಗತಿಗಳೇನೆಂದರೆ: ದೇವಾಲಯವು ಧಾರ್ಮಿಕ ಕೇಂದ್ರವಾಗಿ ಪರಿವರ್ತನೆಗೊಂಡಿತ್ತು. ಪರಿಸಾಯ ಮತ್ತು ಸದ್ದುಕಾಯ ಪಂಗಡದವರು ಆ ದಿನಗ ಳಲ್ಲಿ ಪ್ರಭಾವ ಬೀರಿದ್ದರು. ರೋಮಾಯರು ದೇಶವನ್ನು ಆಳುತ್ತಿದ್ದರು. ಈ ಬದಲಾವಣೆ ಹೇಗೆ ಉಂಟಾಯಿತು?

## ಒಡಂಬಡಿಕೆಗಳ ನಡುವಿನ ಸಮಯ

ಹಳೇ ಮತ್ತು ಹೊಸ ಒಡಂಬಡಿಕೆಯ ನಡುವಿನ ಅಂತರದ ಸಮಯದಲ್ಲಿ ಅನೇಕ ಬದಲಾವಣೆಗಳು ಆದವು.

ಹಳೇ ಒಡಂಬಡಿಕೆಯ ಅಂತ್ಯಗೊಂಡಾಗ, ಅನೇಕ ಯೆಹೂದ್ಯರು ಬಾಬೇಲಿನಿಂದ ಕಾನಾನಿಗೆ[2] ತೆರಳಿದ್ದರು. ಮತ್ತು ಅವರು ಪರ್ಶಿಯನ್ನರ ಆಡಳಿತಕ್ಕೆ ಒಳಗಾಗಿದ್ದರು. ನೆಹೆಮೀಯ ಗ್ರಂಥವು ಹಳೇ ಒಡಂಬಡಿಕೆಯ ಕಡೇಯ ಚಾರಿತ್ರಿಕ ಪುಸ್ತಕವಾಗಿದ್ದು, ಮಲಾಕೀಯ ಕಡೇಯ ಪ್ರವಾದಿಯಾಗಿದ್ದನು. ಒಬ್ಬ ಮೆಸ್ಸೀಯನು ಬಂದು, ಹಾಗೂ ಆತನ ಕುರಿತು ಮತ್ತೊಬ್ಬನು ಮಾರ್ಗವನ್ನು ಸಿದ್ಧಪಡಿಸುವನು ನಂಬಿದ್ದರು. ಅದರ ಕುರಿತು ಮಲಾಕಿಯನು ಬರೆದನು,

> ಇಗೋ, ನನ್ನ ದೂತನನ್ನು ಕಳುಹಿಸುತ್ತೇನೆ, ಆತನು ನನ್ನ ಮುಂದೆ ದಾರಿಯನ್ನು ಸರಿಮಾಡುವನು; ನೀವು ಹಂಬಲಿಸುವ ಕರ್ತನು ತನ್ನ ಆಲಯಕ್ಕೆ ಪಕ್ಕನೆ ಬರುವನು; ಅಹಾ ನಿಮಗೆ ಇಷ್ಟನಾದ ಒಡಂಬಡಿಕೆಯ ದೂತನು ಐತರುತ್ತಾನೆ; ಇದು ಸೇನಾಧೀಶ್ವರ ಯೆಹೋವನ ನುಡಿ (ಮಲಾಕಿ 3:1; 4:5, 6 ಇದನ್ನು ನೋಡಿರಿ).

### ಮೌನ

ಮಲಾಕಿ ಮತ್ತು ಹೊಸ ಒಡಂಬಡಿಕೆಯ ನಡುವಿನ ಅಂತರವು ನಾನೂರು ವರ್ಷಗಳು.[3] ಇದನ್ನು "ಮೌನ" ಸಮಯ ಎಂದು ಕರೆಯಲಾಗಿದೆ. ಅಂದರೆ ಯಾವುದೇ ಪ್ರವಾದನೆಗಳಿರಲಿಲ್ಲ. ಈ ಸಮಯದಲ್ಲಿ ಯಾವುದೇ ದೇವರ ಸಂದೇಶಗಳಿರಲಿಲ್ಲ. ಬರೆಯಲ್ಪಟ್ಟ ಗ್ರಂಥಗಳು ಹಾಗೂ ಪ್ರವಾದಿಗಳೇ ಅವರಿಗೆ ಮಾರ್ಗದರ್ಶಕರಾಗಿದ್ದರು (ಮತ್ತಾಯ 11:13; ಲೂಕ 16:16; ಇದನ್ನು ನೋಡಿ ಲೂಕ 24:44).

ದೇವರು ತನ್ನ ಮಗನನ್ನು ಕಳುಹಿಸಲು, ಏಕೆ ಶತಮಾನಗಳಷ್ಟು ಸಮಯವನ್ನು ತೆಗೆದುಕೊಂಡನು? F. ಲಗಾರ್ಡ್‌ರವರು ಕೆಲವು ಸಾಧ್ಯತೆಗಳನ್ನು ತಿಳಿಸಿರುವನು:[4] (1) ಪ್ರಾಯಶಃ, ದೇವರು ಲೋಕಕ್ಕೆ ಅತ್ಯದ್ಭುತವಾದ ಸಂಗತಿಯನ್ನು ತಿಳಿಸುವ ಕಾರಣವಿರಬಹುದು. ಜನರು ಬಹಳವಾಗಿ ಕಾಯುತ್ತಿದ ಸಮಯದಲ್ಲಿಯೇ, ಯೇಸು ಈ ಲೋಕಕ್ಕೆ ಬಂದನು. (2) ಅಥವಾ ಪ್ರವಾದನೆಯ ಹೇಳಿಕೆಯನ್ನು ಬಹು ಮಹತ್ವದ

ಸಂಗತಿಯನ್ನಾಗಿ ತಿಳಿಸುವ ಕಾರಣವಿರಬಹುದು. ನೆರವೇರಿಕೆಯ ಸಾಧ್ಯತೆಯನ್ನು ದೃಢಪಡಿಸುವ ಕಾರಣವೂ ಇರಬಹುದು. (3) ಮೆಸ್ಸೀಯನ ಸೇವೆಗೆ ಅನುಕೂಲಕರ ವಾದ ರಾಜಕೀಯ ಹಾಗೂ ಧಾರ್ಮಿಕ ಸಮಯಕ್ಕಾಗಿ ಕಾದಿರಬಹುದು. ಆದ್ದರಿಂದ ಪೌಲನು "ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು" ಎಂದನು (ಗಲಾತ್ಯ 4:4ಎ). ಇನ್ನೊಂದು ಅನುವಾದದಲ್ಲಿ "ಸರಿಯಾದ ಕಾಲವು ಬಂದಾಗ, ದೇವರು ತನ್ನ ಮಗನನ್ನು ಕಳುಹಿಸಿದನು."

**ಸಂಪನ್ಮೂಲ**

ಒಡಂಬಡಿಕೆಗಳ ನಡುವಿನ ಸಮಯದಲ್ಲಿ, ಪ್ರವಾದನೆಯು ಮೌನವಾಗಿತ್ತು ಎಂದು ತಿಳಿಯುವಾಗ, ಯೇಸುವಿನ ಸಿದ್ಧತೆಗಾಗಿ ಇದ್ದ ಆ ವರ್ಷಗಳಲ್ಲಿ ಏನೂ ಸಂಭವಿಸಲಿಲ್ಲ ಎಂದು ಹೇಳಲಾಗದು, ಅದರ ಮಾಹಿತಿಯ ಅನೇಕ ಸಂಪನ್ಮೂಲಗಳಿವೆ:

(1) *ಅಪೊಸ್ತಲ ಕೃತ್ಯಗಳು ಬರವಣಿಗೆ.* ಒಡಂಬಡಿಕೆಗಳ ನಡುವೆ ಹದಿನಾಲ್ಕು ಪುಸ್ತಕಗಳು ಬರೆಯಲ್ಪಟ್ಟವು ಅವುಗಳನ್ನು "ಅಪೊಕ್ರಪ" ಎಂದು ಕರೆದರು. ಅಪೊಕ್ರಪ ಎಂದರೆ "ಮರೆಯದ" ಎಂಬ ಅರ್ಥ. ಯೆಹೂದ್ಯರು ಇವುಗಳನ್ನು ಪ್ರೇರಿತವಾದ ವಾಕ್ಯಗಳು ಎಂದು ಪರಿಗಣಿಸಲಿಲ್ಲ ಮತ್ತು ಅವುಗಳು ಯೇಸುವಿನಿಂದಾಗಲೀ ಅಥವಾ ಅಪೊಸ್ತಲರಿಂದಾಗಲೀ ಪ್ರೇರಿತವಾಗಿರಲಿಲ್ಲ.[5] ಅವುಗಳು ಪರ್ಶಿಯನ್ನರ ಹಾಗೂ ಅನ್ಯ ಜನಾಂಗಗಳ ಮೂಡ ನಂಬಿಕೆಗಳನ್ನು ಒಳಗೊಂಡಿರುತ್ತವೆ. ಹೇಗೂ ಅವುಗಳು ಯೆಹೂದ್ಯರ ಹಲವಾರು ಸಂಪ್ರದಾಯಗಳ್ನೂ ಒಳಗೊಂಡಿರುತ್ತದೆ.[6] ಮಕ್ಕಬೀಸ್ ಎಂಬ ಪುಸ್ತಕವು ಸಹಾಯಕವಾಗುತ್ತದೆ; ಕ್ರಿ.ಶ. 175 ಮತ್ತು 132ರಲ್ಲಿ ಯುದಾಯದಲ್ಲಿದ್ದ ಯೆಹೂದ್ಯರ ಇತಿಹಾಸವನ್ನು ನೀಡುತ್ತದೆ.

(2) *ಯೋಸೇಫಸನ ಬರವಣಿಗೆ.* ಯೋಸೇಫಸನು, ಯೆಹೂದ್ಯರ ಇತಿಹಾಸಕಾರನಾಗಿದ್ದನು ಅವನು ಕ್ರಿ.ಶ. 37ರಲ್ಲಿ ಹುಟ್ಟಿದ್ದಾನೆ. ತೀತನೆಂಬವನಿಂದ ಉಂಟಾದ ಯೆರೂಸಲೇಮಿನ ಅಕ್ರಮಣ ಹಾಗೂ ನಾಶನದ ಇತಿಹಾಸದ, ಎರಡು ಪ್ರಮುಖ ಅಂಶಗಳನ್ನು ತಿಳಿಸಿರುವನು: *ಅಂಟಿಕ್ವಿಟೀಸ್ ಆಫ್ ದಿ ಜ್ಯೂಸ್* (ಆತನ ಜನರ ಕುರಿತ, ಸೃಷ್ಟಿಯಿಂದ ಆದ ಇತಿಹಾಸ) ಮತ್ತು ಯೆಹೂದ್ಯರ ಯುದ್ಧಗಳು (ಕ್ರಿ.ಪೂ. 170 ಇತಿಹಾಸ).[7] ಇವುಗಳಲ್ಲಿನ ಯೋಸೇಫಸನು ನೀಡಿರುವ ಕೆಲವು "ಘಟನಾವಳಿಗಳು" ಪ್ರಶ್ನಾರ್ಥಕವಾಗಿವೆ, ಆದರೂ ಅವನ ಬರವಣಿಗೆಯ ಮಾಹಿತಿಯ ಸಂಪನ್ಮೂಲವಾಗಿದೆ.

(3) *ಗ್ರೀಕರ ಮತ್ತು ರೋಮಾಯರ ಸಾಕ್ಷಿಗಳು.* ಈ ಸರಣಿಯಲ್ಲಿ ಈ ಮೂಲದ ಮಾಹಿತಿಯನ್ನು ನೀಡಲಾಗುವದು.

(4) *ಪ್ರಾಚೀನ ವಸ್ತುಗಳ ಮೂಲ.* ಪಾಲೆಸ್ತೇನಿನಲ್ಲಿ ದೊರಕಿದ ಪ್ರಾಚೀನ ವಸ್ತುಗಳ ಮುಖಾಂತರ ಯೆಹೂದ್ಯರ ಜೀವನ ಶೈಲಿಯ ಇತಹಾಸದ ಬೆಳಕನ್ನು ಚೆಲ್ಲುತ್ತದೆ.

(5) *ಗ್ರಂಥಗಳು.* ಸುವಾರ್ತೆಗಳು ಸಹ ಕೆಲವು ಗುರುತರ ಮಾಹಿತಿಗಳನ್ನು ನೀಡುತ್ತವೆ.

## ನಾಲ್ಕು ಸಾಮ್ರಾಜ್ಯಗಳು

ಒಡಂಬಡಿಕೆಗಳ ನಡುವಿನ ನಾನೂರು ವರ್ಷಗಳ ಅಂತರಲ್ಲಿ ದೇವರು ಮಾನವರಲ್ಲಿ ಚಲಿಸಿ, ತನ್ನ ಉದ್ದೇಶವನ್ನು ಈಡೇರಿಸುತ್ತಲೇ ಇದ್ದನು. ದಾನಿಯೇಲ 2ರ ಬಾಬೇಲಿನ ಅರಸನಾದ ನೆಬುಕದ್ನೇಜರನ ಕನಸಿನಲ್ಲಿ, ಆ ವರ್ಷಗಳಲ್ಲಿನ ರಾಜಕೀಯ ಪರಿಸ್ಥಿತಿಗಳನ್ನು ವಿವರಿಸಲಾಗಿದೆ.

> ... ರಾಜನೇ, ನೀನು ಕಂಡನು ಅಹಾ, ಅದ್ಭುತಪ್ರತಿಮೆ; ಥಳಥಳನೆ ಹೊಳೆಯುವ ಆ ದೊಡ್ಡ ಪ್ರತಿಮೆಯು ನಿನ್ನೆದುರಿಗೆ ನಿಂತಿತ್ತು; ಭಯಂಕರವಾಗಿ ಕಾಣಿಸಿತು. ಆ ಪ್ರತಿಮೆಯ ತಲೆಯು ಅಪರಂಜಿ, ಎದೆತೋಳುಗಳು ಬೆಳ್ಳಿ, ಹೊಟ್ಟೆ ಸೊಂಟಗಳು ತಾಮ್ರ, ಕಾಲುಗಳು ಕಬ್ಬಿಣ, ಹೆಜ್ಜೆಗಳು ಕಬ್ಬಿಣ ಮತ್ತು ಮಣ್ಣು (ದಾನಿಯೇಲ 2:31-33).

"ಬಂಗಾರದ ತಲೆಗೆ" ಅರಸನಾದ ನೆಬುಕದ್ನೇಜರನು ಹೋಲಿಕೆಯಾಗಿದ್ದನು (ವಚನಗಳು 37, 38). ಎಂದು ದಾನಿಯೇಲನು ಹೇಳಿ,

> ನಿನ್ನ ಕಾಲವಾದ ಮೇಲೆ ನಿನಗಿಂತ ಕನಿಷ್ಟವಾದ ಮತ್ತೊಂದು ರಾಜ್ಯ ವುಂಟಾಗುವದು; ಅನಂತರ ಬೇರೊಂದು ಮೂರನೆಯ ರಾಜ್ಯವು ತಾಮ್ರದ್ದಾಗಿ ತಲೆದೋರಿ ಭೂಮಂಡಲವನ್ನೆಲ್ಲಾ ಆಳುವದು. ನಾಲ್ಕನೆಯ ರಾಜ್ಯವು ಕಬ್ಬಿಣದಷ್ಟು ಗಟ್ಟಿ; ಕಬ್ಬಿಣವು ಎಲ್ಲಾ ವಸ್ತುಗಳನ್ನು ಚೂರುಚುರಾಗಿ ಒಡೆದು ಹಕುತ್ತದಷ್ಟೆ; ಸಕಲವನ್ನೂ ಧ್ವಂಸಮಾಡುವ ಕಬ್ಬಿಣದಂತೆಯೇ ಅದು ಚೂರುಚುರಾಗಿ ಧ್ವಂಸಮಾಡುವದು (ವಚನಗಳು 39, 40).

ಗ್ರಂಥಗಳ ಹಾಗೂ ಇತಿಹಾಸದ ಪ್ರಕಾರ ದಾನಿಯೇಲ 2ರಲ್ಲಿರುವ ನಾಲ್ಕು ಸಾಮ್ರಾಜ್ಯಗಳು (1) ಬಾಬಿಲನ್ ಸಾಮ್ರಾಜ್ಯ, (2) ಮದೋ - ಪರ್ಶಿಯನ್ ಸಾಮ್ರಾಜ್ಯ, (3) ಗ್ರೇಶಿಯನ್ ಸಾಮ್ರಾಜ್ಯ, ಮತ್ತು (4) ರೋಮನ್ ಸಾಮ್ರಾಜ್ಯ.[8]

ಹಳೇ ಒಡಂಬಡಿಕೆಯು ಮತ್ತಾಯವಾಗುವ ಮೊದಲೇ, ಮೊದಲ ಸಾಮ್ರಾಜ್ಯ (ಬಾಬೆಲ್) ಪತನಗೊಂಡು, ಎರಡನೇ ಸಾಮ್ರಾಜ್ಯವು (ಮೆಡ್-ಪರ್ಶಿಯ) ಅಧಿಕಾರಕ್ಕೆ ಬಂದಿತ್ತು (ನೋಡಿರಿ ದಾನಿಯೇಲ 5:28, 30, 31; 6:8, 12, 15, 28; 8:20; 10:1; 11:1; ಎಬ್ರಯೇಲ 1:1-4; ಎಸ್ತೇರ್ 1:19). ಆದ್ದರಿಂದ ಎರಡು, ಮೂರು, ಹಾಗೂ, ನಾಲ್ಕನೆಯ ಸಾಮ್ರಾಜ್ಯದ ಸಮಯದಲ್ಲಿ ನಡೆದ ಘಟನೆಗಳ ಬಗ್ಗೆ ನಮ್ಮ ಚಿಂತನೆಯಾಗಿದೆ.

### ಮೆಡೋ-ಪರ್ಶಿಯನ್ನರ ಕಾಲ[9] (ಕ್ರಿ.ಪೂ. 539-333[10])

ಹಳೇ ಒಡಂಬಡಿಕೆಯ ಅಂತ್ಯವಾಗುವಾಗ, ಕಾನಾನ್ ದೇಶವು ಪರ್ಶಿಯನ್ನರ ಆಡಳಿತಕ್ಕೆ ಒಳಪಟ್ಟಿತು. ಯೆಹೂದ್ಯರು ಈ ಕಾಲದಲ್ಲಿ ಸಮಾಧಾನದಿಂದಿದ್ದರು. ಸಮೀಪದ ಪರ್ಶಿಯನ್ ರಾಜ್ಯಪಾಲರ ಮೇಲುಸ್ತುವಾರಿಯಲ್ಲಿ, ಯೆಹೂದ್ಯ ಸಾಮ್ರಾಜ್ಯರು ಅವರ ಮಹಾಯಾಜಕರ ಆಡಳಿತಕ್ಕೆ ಒಳಪಟ್ಟಿತ್ತು.

ಈ ಕಾಲಾವದಿಯಲ್ಲಿ, ಹಿಂದಿರುಗುತ್ತಿದ್ದ ಯೆಹೂದ್ಯರ ಹಾಗೂ ಕಾನಾನ್ ದೇಶದಲ್ಲಿ ವಾಸವಾಗಿದ್ದ ಸ್ಥಳೀಯ ಯೆಹೂದ್ಯರ ನಡುವೆ ಘರ್ಷಣೆ ಉಂಟಾಗಿತ್ತು (ನೋಡಿ ಎಜ್ರ 4:4; ನೆಹಮೀಯ 4:1-8). ಈ ವಾಸಿಗಳು ಯೂದಾಯದ ಉತ್ತರ ದಿಕ್ಕಿನಲ್ಲಿ ನಿವಾಸಿಗಳಾದರು ಅವರನ್ನು ಸಮಾರ್ಯರು ಎಂದು ಕರೆದರು (ಎಜ್ರ 4:10, 17; ನೆಹಮೀಯ 4:2); ಅವರು "ಸಮಾರ್ಯರೆಂದು" ಕರೆಯಲ್ಪಟ್ಟರು. 2 ಅರಸು 17:24-33ರಲ್ಲಿ, ಸಮಾರ್ಯದವರು ಯಾವ ರೀತಿಯಲ್ಲಿ ಯೆಹೋವ ದೇವರ ಬದಲಾಗಿ, ಅನ್ಯ ದೇವತೆಗಳನ್ನು ಪೂಜಿಸಿದರು ಎಂದು ಗಮನಿಸುತ್ತೇವೆ. ವಚನ 33ರಲ್ಲಿ, "ಅವರು ದೇವರಿಗೆ ಭಯಪಟ್ಟರೂ, ತಮ್ಮದೇ ಆದ ದೇವತೆಗಳನ್ನು ಪೂಜಿಸಿದರು ..." ಯೇಸು ಈ ಲೋಕಕ್ಕೆ ಬಂದ ಸಮಯದಲ್ಲಿ ಸಮಾರ್ಯರು ದೇಶವನ್ನು ಆವರಿಸಿಕೊಂಡಿದ್ದರು (ಯೋಹಾನ 4:3, 4). ಯೆಹೂದ್ಯರ ಹಾಗೂ ಸಮಾರ್ಯರ ನಡುವೆ ಉಂಟಾದ ಘರ್ಷಣೆಯ ನಿಮಿತ್ತ ಯೇಸುವಿನ ಜೀವಿತಕ್ಕೆ ಅನೇಕ ಹಿನ್ನಲೆಯನ್ನು ನೀಡಿದವು (ಲೂಕ 10:33; 17:16; ಯೋಹಾನ 4:9).

## ಗ್ರೇಷಿಯನ್ನರ ಕಾಲವಧಿ[11] (ಕ್ರಿ.ಪೂ. 333-165)

(1) *ಅಲೆಕ್ಸಾಂಡರ್ ಚಕ್ರಾಧಿಪತಿ (ಕ್ರಿ.ಪೂ. 333-323).* ಕ್ರಿ.ಪೂ. 336ರಲ್ಲಿ ಇಪ್ಪತ್ತು ವರ್ಷದ ಪ್ರಾಯದ ಮಹಾ ಅಲೆಕ್ಸಾಂಡ್ರನು ಗ್ರೀಸಿನ ಸೈನ್ಯವನ್ನು ತನ್ನ ವಶಕ್ಕೆ ಪಡಕೊಂಡನು. ಕೇಲವೇ ವರ್ಷಗಳಲ್ಲಿ, ಅವನು ಪ್ರಪಂಚವನ್ನು ಜಯಿಸಿದನು. ತನ್ನ ಆಡಳಿತಾವಧಿಯಲ್ಲಿ ತೈರ್ ಪಟ್ಟಣವನ್ನು ನಿರ್ಮೂಲ ಮಾಡಿದನು, ಆದ್ದರಿಂದ ಯೆಹೆಜ್ಕೇಲ 26 ಮತ್ತು 28 ಪ್ರವಾದನೆಯು ನೆರವೇರಿತು. ಅವನ ವರ್ಚಸ್ಸಿನ ಮೂಲಕ ಗ್ರೀಕ್ ಸಂಸ್ಕೃತಿಯು ಪ್ರಪಂಚದಲ್ಲಿ ಪ್ರಚಲಿತವಾಯಿತು. ನಂತರ ಅವನು ನೈಲ್ ನದಿಯ ತೀರದಲ್ಲಿ ಅಲೆಕ್ಸಾಂಡ್ರಿಯ ಎಂಬ ಪಟ್ಟಣವನ್ನು ಕಟ್ಟಿದನು. ಅದು ಗ್ರೀಕ್ ಸಂಸ್ಕೃತಿಯು ಪ್ರಮುಖ ಕೇಂದ್ರವಾಯಿತು. ಆದ್ದರಿಂದ ಗ್ರೀಕ್ ಭಾಷೆಯು ಸಾರ್ವತ್ರಿಕ ಭಾಷೆಯಾಗಿ, ಕ್ರೈಸ್ತರ ಮೇಲೂ ವರ್ಚಸ್ಸಿನ್ನು ಬೀರಿತು.[12]

ಹೊಸ ಒಡಂಬಡಿಕೆಯನ್ನು ಕೊಯ್ನೆ (ಸಮಾನ್ಯ) ಎಂಬ ಗ್ರೀಕ್ ಭಾಷೆಯಲ್ಲಿ ಬರೆಯಲಾಯಿತು. ಕ್ರಿ.ಪೂ. 333ರಲ್ಲಿ ಅಲೆಕ್ಸಾಂಡ್ರನು ಯೆರೂಸಲೇಮನ್ನು ತನ್ನ ವಶಕ್ಕೆ ಪಡೆದನು. ಹೇಗೆ ಒಬ್ಬ ಮಹಾಯಾಜಕನು, ಆ ಅಧಿಕಾರಿಯನ್ನು ಕೋಟೆಯ ಬಾಗಿಲಿನಲ್ಲಿ ಸ್ವಾಗತ ಮಾಡಿದನು ಎಂದು ಯೋಸೇಫಸನು ವಿವರಿಸಿರುವನು. ಅಲೆಕ್ಸಾಂಡ್ರನು ಯೆಹೂದ್ಯರಿಗೆ ವಿಶೇಷ ಆಧ್ಯತೆಯನ್ನು ನೀಡಿದನು. ಅವರನ್ನು ಪ್ರತ್ಯೆಕವಾಗಿ ಗುಂಪನ್ನಾಗಿ ಪರಿಗಣಿಸಿ ಅವರಿಗೆ ಅನುಕೂಲವಿರುವ ಸ್ಥಳಗಳಲ್ಲಿ ನೆಲೆಗೊಳ್ಳಲು, ಅನುಕೂಲ ಮಾಡಿಕೊಟ್ಟನು.

ಈ ಸಮಯವನ್ನು ಬಳಸಿಕೊಂಡು ಸದ್ದುಕಾಯರು, ಯೆಹೂದ್ಯರ ನಡುವೆ ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡರು, ಅವರ ಬಗ್ಗೆ ಮುಂದೆ ವಿವರಿಸುತ್ತೇವೆ.

ಕ್ರಿ.ಪೂ. 323ರಲ್ಲಿ ಅಲೆಕ್ಸಾಂಡ್ರನ ಮರಣ ಉಂಟಾಯಿತು. ನಂತರದ ಇಪ್ಪತ್ತು ವರ್ಷ ಅಧಿಕಾರಕ್ಕಾಗಿ ತಳಮಳ ಉಂಟಾಯಿತು. ಅಂತಿಮವಾಗಿ ಅವನ ಸಾಮ್ರಾಜ್ಯವು ನಾಲ್ಕು ವಿಭಾಗಗಳಾದವು: ಗ್ರೀಸ್, ಆಸ್ಯ, ಐಗುಪ್ತ ಹಾಗೂ ಸಿರಿಯಾ.[13] ಐಗುಪ್ತ ಹಾಗೆ ಸಿರಿಯ ಮಹತ್ವದ ಸಾಮ್ರಾಜ್ಯಗಳು. ಟಾಲೆಮಿಸರು[14] ಐಗುಪ್ತವನ್ನು, ಸೆಲ್ಯೂಸಿಡರು[15] ಸಿರಿಯವನ್ನು ಆಡಳಿತ ಮಾಡಿದರು.

(2) *ಟಾಲೆಮೀಯರು (ಕ್ರಿ.ಪೂ. 323-198).* ಐಗುಪ್ತ ಮತ್ತು ಸಿರಿಯದ ನಡುವೆ ಇದ್ದ ಪಾಲೆಸ್ತೇನ್ ಇವರಿಬ್ಬರ ನಡುವೆ ತಳಮಳಗೊಂಡಿತ್ತು.[16] ಐಗುಪ್ತದ ಸೈನಿಕರು ಸಿರಿಯಕ್ಕೆ ತೆರಳುವಾಗ, ಉತ್ತರದಲ್ಲಿದ್ದ ಪಾಲೆಸ್ತೇನನ್ನು ವಶಮಾಡಿಕೊಳ್ಳುತ್ತಿದ್ದರು. ಸಿರಿಯದ ಸೈನಿಕರು ದಕ್ಷಿಣಕ್ಕೆ ಐಗುಪ್ತಕ್ಕೆ ಬರುವಾಗ, ಅವರು ಸಹ ಪಾಲೇಸ್ತಿನನ್ನು ವಶಪಡಿಸಿಕೊಳ್ಳುತ್ತಿದ್ದರು.

ಮುಂದಿನ ನೂರು ವರ್ಷಗಳ ಕಾಲ, ಕೆಲಕಾಲ ಯೆಹೂದ್ಯರು ಸಿರಿಯದ ಅಧಿಕಾರಕ್ಕೆ ಒಳಪಟ್ಟಿದ್ದರು, ಆದರೆ ಬಹಳಷ್ಟು ಸಮಯ ಅವರು ಐಗುಪ್ತದ ಅಧಿಕಾರಕ್ಕೆ ಒಳಪಟ್ಟಿದ್ದರು. ಟಾಲೆಮಿಯು ಯೆರೂಸಲೇಮನ್ನು ವಶಪಡಿಸಿಕೊಂಡು, ಅದರಲ್ಲಿದ್ದ ಯೆಹೂದ್ಯರನ್ನು ಅಲೆಕ್ಸಾಂಡ್ರನ ವಸಾಹತಿಗೆ ಸೇರಿಸಿದರು. ಅವರಿಗೆ ಪೂರ್ಣ ಪ್ರಮಾಣದ ನಾಗರೀಕ ಹಕ್ಕನ್ನು ನೀಡಿದ್ದನು ಹಾಗೂ ಅವರ ಪಾಂಡಿತ್ಯವನ್ನು ಪ್ರೋತ್ಸಾಹಿಸಿದನು.

ಟಾಲೇಮೀಯನ ಆಡಳಿತಾವಧಿಯಲ್ಲಿ, ಯೆಹೂದ್ಯರಿಗೆ ಸಮಾಧಾನದ ಕಾಲವಾಗಿತ್ತು. ಆ ಸಮಯದಲ್ಲಿ ಐಗುಪ್ತದಲ್ಲಿ ಸೆಪ್ಟ ಜೂಯಂಟಿನ ಅನುವಾದದ ಮುದ್ರಣವನ್ನು ಮಾಡಿದರು. ಅಲೆಕ್ಸಾಂಡ್ರನ ಗ್ರಂಥಾಲಯಕ್ಕಾಗಿ ಇಬ್ರಿಯ ಗ್ರಂಥಗಳನ್ನು ಗ್ರೀಕ್ ಭಾಷೆಯಲ್ಲಿ ಅನುವಾದ ಮಾಡಲು ಎರಡನೆಯ ಟಾಲೆಮೀಯನು ಅನುವು ಮಾಡಿದನು. ಕ್ರಿ.ಪೂ. 285ರಲ್ಲಿ ಅದರ ಅನುವಾದವು ಪೂರ್ಣವಾಯಿತು. ಸಂಪ್ರದಾಯದ ಪ್ರಕಾರ ಎಪ್ಪತ್ತು ಮಂದಿ ಯೆಹೂದ್ಯ ಪಂಡಿತರು ಇದರ ಅನುವಾದವನ್ನು ಮಾಡಿರುವರು. (ಸೆಪ್ಟಜೂಯಂಟ್ ಎಂದರೆ "ಎಪ್ಪತ್ತು" ಎಂಬ ಅರ್ಥ.) ಹೊಸ ಒಡಂಬಡಿಕೆಯ ಬರಹಗಾರರ ಹಾಗೂ ಪ್ರಸಂಗಿಗಳ ಹಳೇ ಒಡಂಬಡಿಕೆಯ ಬರಹಗಾರರ ಹಾಗೂ ಪ್ರಸಂಗಿಗಳ ಹಳೇ ಒಡಂಬಡಿಕೆಯ ಹೇಳಿಕೆಗಳನ್ನು

ಸೆಪ್ಟಜೂಯಂಟ್ ಪ್ರತಿಯಿಂದ ಪಡೆಯಲಾಗಿದೆ.

ಈ ಕಾಲದಲ್ಲಿ, ಐಗುಪ್ತ ಮತ್ತು ಸಿರಿಯದ ನಡುವಿನ ಘರ್ಷಣೆ ಮುಂದುವರೆದಿತ್ತು. ಅಂತಿಮವಾಗಿ ಕ್ರಿ.ಪೂ. 198ರಲ್ಲಿ ಪಾಲೆಸ್ತೀನ ಸಿರಿಯನ್ನರ ಆಡಳಿತಕ್ಕೆ ವಶವಾಯಿತು.

(3) *ಸೆಲ್ಯೂಸಿಡರು (ಕ್ರಿ.ಪೂ. 198-165).* ತಮ್ಮ ಆಡಳಿತವನ್ನು ಸರಳ ಮಾಡುವ ಸುವಾಗಿ ಸಿಲ್ಯುಸಿಡರು ಪಾಲೆಸ್ತೇನ್ ದೇಶವನ್ನು ಐದು ಭಾಗಗಳನ್ನಾಗು ವಿಂಗಡಿಸಿದರು: ಯುದಾಯ, ಸಮಾರ್ಯ, ಗಲಿಲಾಯ, ಪೆರಿಯಾ, ಹಾಗೂ ತ್ರೆಕೋನಿಯಾ ಇವುಗಳನ್ನು ಮುಂದೆ ಹೆಚ್ಚಾಗಿ ಗಮನಿಸೋಣ.

ಸಿರಿಯನ್ನರ ಕಾಲವು, ಯೆಹೂದ್ಯರ ಇತಿಹಾಸದಲ್ಲಿ ಕತ್ತಲಿನ ಕಾಲವಾಗಿತ್ತು. ನಾಲ್ಕನೇ ಅಂಟಿಯೋಕಸ್, ಎಫಿಫೇಸೇನ ಅಂತಿಯೋಕನೆಂಬವನು ಇವರ ವೈರಿ ಯಾಗಿದ್ದನು. ಲಾಗಾರ್ಡ್‌ರವರು ಅವನನ್ನು ಕುರಿತು "ಸಾರ್ವಜನಿಕ ಸ್ಥಾನಿದಲ್ಲಿದ್ದ ಬಹು ಕ್ರೂರಿಯಾದ ಮನುಷ್ಯನು"[17] ಎಂದು ಕರೆದಿರುವರು ಎಫಿಪೇನೆಸನು (ಕ್ರಿ.ಪೂ. 175-165). ಯೆಹೂದ್ಯರನ್ನು ದ್ವೇಷಿಸಿ, ಅವರನ್ನು ಗ್ರೀಕರನ್ನಾಗಿ ಪರಿವರ್ತಿಸಲು ಯತ್ನಿಸಿದನು. ಯೆರೂಸಲೇಮಿನಲ್ಲಿ ಜೂಪಿಟರನ ವಿಗ್ರಹವನ್ನು ನಿರ್ಮಿಸಿ, ಯೆಹೂದ್ಯ ಧರ್ಮವನ್ನು ಹತ್ತಿಕ್ಕಲು ಪ್ರಯತ್ನಿಸಿದನು. ಸಾವಿರಾರು ಯೆಹೂದ್ಯರನ್ನು ಗುಲಾಮರನ್ನಾಗಿ ಮಾರಿ, ಸಾವಿರಾರು ಜನರನ್ನು ಕೊಂದುಹಾಕಿದನು. ದೇವಾಲಯದ ದ್ರವ್ಯಗಳನ್ನು ದೋಚಿಕೊಂಡು, ಅದರ ವೇದಿಯ ಮೇಲೆ ಹಂದಿಯನ್ನು ಯಜ್ಞಮಾಡಿದನು.[18] ಅದರ ಬೂದಿಯನ್ನು ನೀರಿನಲ್ಲಿ ಮಿಶ್ರಮಾಡಿ, ಆ "ಹಂದಿಯ ನೀರಿನಿಂದ" ಚಿಮುಕಿಸಿ, ದೇವಾಲಯವನ್ನು ಅಶುದ್ಧಗೊಳಿಸಿದನು.

## ಸ್ವತಂತ್ರದ ಕಾಲ (ಕ್ರಿ.ಪೂ. 165-63)

ಅಂತಿಯೋಕ್ಯನ ಯೆಹೂದ್ಯರಿಗೆ ನೀಡಿದ ಹಿಂಸೆಯ ನಿಮಿತ್ತವಾಗಿ, ಅವರಲ್ಲಿ ವೃದ್ಧನಾದ ಮತ್ತಿಯನೆಂಬ ಯಾಜಕರು ಅವನ ವಿರುದ್ಧ ದಂಗೆ ಎದ್ದನು, ಅವನಿಗೆ ಯುದ್ಧವೀರರಂತಿದ್ದ ಐದು ಜನ ಗಂಡು ಮಕ್ಕಳಿದ್ದರು. ಅವನ ಮಗನಲ್ಲಿ ಒಬ್ಬನಾದ ಯೂದ ಎಂಬವನು ಆ ದಂಗೆಯ ನಾಯಕತ್ವವನ್ನು ವಹಿಸಿಕೊಂಡನು. ಯೂದನನ್ನು "ಸುತ್ತಿಗೆಯಂತಿರುವ ಯೂದನು" ಎಂದು ಕರೆಯುತ್ತಿದ್ದರು. ಗ್ರೀಕ್ ಭಾಷೆಯಲ್ಲಿ "ಸುತ್ತಿಗೆಯನ್ನು" "ಮಕ್ಕಬೀಸ್" ಎನ್ನುತ್ತಿದ್ದರು. ಆದ್ದರಿಂದ ಈ ಯುಗವನ್ನು ಯೆಹೂದ್ಯರ ಇತಿಹಾಸದ "ಮಕ್ಕಬೀಸ್" ಯುಗ ಎಂದು ಕರೆದರು.[19] ಕ್ರಿ.ಪೂ. 165ರಲ್ಲಿ ಮಕ್ಕಬೀಸನು ಯೆರೂಸಲೇಮನ್ನು ತನ್ನ ವಶಕ್ಕೆ ಹಿಂಪಡೆದನು. ದೇವಾಲಯವನ್ನು ನಿರ್ಮಲಗೊಳಿಸಿ, ಯೆಹೋವನಿಗೆ ಪುನಃ ಸಮರ್ಪಿಸಿದನು. ಇದು "ಸಮರ್ಪಣೆಯ" ಹಬ್ಬದ ಹಿನ್ನೆಲೆಯಾಗಿದೆ (ನೋಡಿರಿ ಯೋಹಾನ 10:22).

ಕ್ರಿ.ಪೂ. 163 ರಿಂದ 143ರವರೆಗೆ ಸಿರಿಯನ್ನರೊಂದಿಗಿನ ಯುದ್ಧ ಮುಂದುವರೆದಿತ್ತು. ಅಂತಿಮವಾಗಿ ಇಸ್ರಾಯೇಲ್ಯರು ತಮ್ಮ ಸ್ವಾತಂತ್ರವನ್ನು ಸಾಧಿಸಿಕೊಂಡರು. ಕ್ರಿ.ಪೂ. 135ರಲ್ಲಿ ಜಾನ್ ಹಿರಂಬಾಸನ ಅಧಿಪತ್ಯದಲ್ಲಿ ಯೆಹೂದ್ಯ ಸಾಮ್ರಾಜ್ಯವು ಸ್ಥಾಪನೆಗೊಂಡಿತು.

ಈ ಕಾಲದಲ್ಲಿ ಯೆಹೂದ್ಯರಲ್ಲಿ ಫರಿಸಾಯ ಹಾಗೂ ಸದ್ದುಕಾಯರೂ ಎಂಬ ಎರಡು ಒಳಪಂಗಡಗಳು ಉದ್ಭವಿಸಿದವು. ಈ ಪಂಗಡಗಳ ಹಾಗೂ ಇತರೆ ಗುಂಪುಗಳ ಕುರಿತು ಮುಂದೆ ವಿವರಿಸುತ್ತೇನೆ. ಈ ಅವದಿಯಲ್ಲಿಯೇ, ಯೆಹೂದ್ಯರನ್ನು ಆಡಳಿತ ನಡೆಸುವಂಥ ಯಾಜಕರ ಅಧಿಪತ್ಯ ಉಂಟಾಯಿತು. ಅವರು ಧಾರ್ಮಿಕವಾಗಿರದೆ, ರಾಜಕೂಯ ಧ್ಯೇಯ ವುಳ್ಳವರಾಗಿದ್ದರು. ಅಧಿಕಾರದಲ್ಲಿದವರು ಮಹಾಯಾಜಕರನ್ನು ಅಧಿಕಾರಿಗಳನ್ನಾಗಿ ನೇಮಿ ಸುತ್ತಿದ್ದರು.[20]

ಈ ಕಾಲದ ಅಂತ್ಯದಲ್ಲಿ, ನಾಗರೀಕ ಕೊರತೆಯ ಅವಧಿಯಾಗಿ ಅಂತ್ಯಗೊಂಡಿತು. ಜಾನ್ ಹಿರಿಕಾನನ ಕುಟುಂಬದ ಸದಸ್ಯರುಗಳು, ಸಿಂಹಾಸನವನ್ನೇರಲು ಪೈಪೋಟಿ ನಡೆಸಿದರು. ಅಲ್ಲಿ ಒಳಸಂಚು, ರಾಜಕೀಯ ಹತ್ಯೆಗಳು ಉಂಟಾದವು ಅಂತಿಮವಾಗಿ ಇವರಲ್ಲಿ

ಕೆಲವರು ತಮ್ಮ ಸ್ಥಾನವನ್ನು ದೃಢಪಡಿಸಿಕೊಳ್ಳುವದಕ್ಕಾಗಿ - ರೋಮಾಯರ ಸಹಾಯಕ್ಕಾಗಿ ಮುಂದಾದರು. ರೋಮಾಯರ ಸಹಾಯವನ್ನು ಪಡೆಯುವದು ಅಂದರೆ, ಕೋಳಿಗಳು ತಮ್ಮ ಜಗಳವನ್ನು ಪರಿಹರಿಸಿಕೊಳ್ಳುವದಕ್ಕಾಗಿ ನರಿಯನ್ನು ತಮ್ಮ ಪಂಜರದೊಳಗೆ ಆಹ್ವಾನಿಸಿ, ಅದರಿಂದ ತಮ್ಮ ವ್ಯಾಜ್ಯಗಳನ್ನು ಪರಿಹರಿಸಿಕೊಂಡಂತೆ, ಈಗ ಯೆಹೂದ್ಯರು ತಮಗಿದ್ದ ಸ್ವಾತಂತ್ರವನ್ನು ಕಳಕೊಂಡರು.

**ರೋಮಾಯರ ಯುಗ (ಕ್ರಿ.ಪೂ. 63 ರಿಂದ ಕ್ರಿ.ಶ. 70[21])**

ಕ್ರಿ.ಪೂ. 63ರಲ್ಲಿ ಪಾಂಪೆ ಎಂಬ ಚಕ್ರವರ್ತಿಯು, ಯೆರೂಸಲೇಮನ್ನು, ವಶಪಡಿಸಿಕೊಂಡನು.[22] ಯೇಸುವಿನ ಕಾಲದಲ್ಲಿ ರೋಮಾಯದ ಅಗಸ್ತನು ಕೈಸರನು ಆಡಳಿತ ನಡೆಸುತ್ತಿದ್ದನು (ಆಕ್ಟೆವಿಯಸ್) (ಕ್ರಿ.ಪೂ. 27-ಕ್ರಿ.ಶ. 14) (ಲೂಕ 2:1) ಮತ್ತು ತಿಬೇರಿಯ ಕೈಸರನು (ಕ್ರಿ.ಶ. 14-37) (ಲೂಕ 3:1).

ರೋಮಾಯರಿಗೆ ಪಾಲೇಸ್ತೇನಿನ ಜವಾಬ್ದಾರಿಯ ಅಧಿಕಾರವನ್ನು ನೀಡಲಾಯಿತು. ಅಂತಿಪತ್ರವನ್ನು ಯುದಾಯದ ಅಧಿಕಾರಿಯನ್ನಾಗಿ ಮಾಡಲಾಯಿತು. ನಂತರ ಆರಂಭದಲ್ಲಿ ಕ್ರಿ.ಪೂ. 37-3ರಲ್ಲಿ ಇವನ ಮಗನಾದ ಹೆರೋದ ಚಕ್ರವರ್ತಿಯು ಯುದಾಯದ ಅರಸನಾದನು (ಲೂಕ 1:5). ಅವನು ಒಂದು ನಿಖರವಾದ ರಾಜ್ಯಭಾರವನ್ನು ಮಾಡಿದನು ಆದರೆ, ಇದರಲ್ಲಿ ತನ್ನ ದುರ್ಗುಣವನ್ನು ಬಳಸಿಕೊಂಡನು. ಅವನು ಯೆರೂಸಲೇಮಿನಲ್ಲಿ ಗ್ರೀಕರಿಗೆ ಸಂಬಂಧಪಟ್ಟ ರಥಗಳ ಓಟವನ್ನು ಪರಿಚಯಮಾಡಿ, ಯೆಹೂದ್ಯರ ಕೆಂಗಣ್ಣಿಗೆ ಗುರಿಯಾದನು. ಅವರನ್ನು ಪುನಃ ತನ್ನ ಬಳಿಗೆ ಸೆಳೆಯುವದಕ್ಕಾಗಿ, ಅವರ ದೇವಾಲಯವನ್ನು ಪುನ ನಿರ್ಮಾಣ ಮಾಡಲು ಆರಂಭಿಸಿದನು (ನೋಡಿ ಯೋಹಾನ 2:20). ಎಫಿಫೇನನು ಅದನ್ನು ನಾಶಮಾಡಿದ್ದನು. ಯೇಸುವನ್ನು ನಾಶಮಾಡುವ ಕಾರಣದಿಂದ ಹಸುಗೂಸುಗಳನ್ನು ಕೊಂದು ಹಾಕಿದ್ದ ಅವಧಿಯು ಇದಾಗಿತ್ತು (ಮತ್ತಾಯ 2:1-18).

ಹೆರೋದ ಮಹಾ ರಾಜನು ಸತ್ತ ಬಳಿಕ (ಮತ್ತಾಯ 2:19), ಟೆಟ್ರಾರ್ಚನು ಅಧಿಕಾರವಹಿಸಿಕೊಂಡನು (ನಾಲ್ಕರ ಆಡಳಿತ): (1) ಪ್ರಾಥಮಿಕ ಹಂತದಲ್ಲಿ, ಹೆರೋದನ ಮಗನಾದ ಅರ್ಕೆಲನಗೆ ಯುದಾಯ ಮತ್ತು ಸಮಾರ್ಯದ ಜವಾಬ್ದಾರಿ ನೀಡಲಾಯಿತು (ಮತ್ತಾಯ 2:22). ಕ್ರಿ.ಶ. 6ರಲ್ಲಿ ಅವನನ್ನು ಅಧಿಕಾರದಿಂದ ಇಳಿಸಲಾಯಿತು ಮತ್ತು ಇತರೆ ಅನೇಕ ಅಧಿಕಾರಿಗಳು ನೇಮಕಗೊಂಡಿದ್ದರು (ಪಿಲಾತನು ಈರನೆಯ ರಾಜ್ಯ ಪಾಲನಾಗಿದ್ದನು ಲೂಕ 3:1). (2) ಹೆರೋದ ಅಂತಿಪನು, ಅಂದರೆ "ಹೆರೋದ" ಎಂಬ ಸರಳ ನಾಮ, "ಹೆರೋದ ಟೆಟ್ರಾರ್ಚ್" ಎಂಬ ಶಿರೋನಾಮ (ಹೊಸ ಒಡಂಬಡಿಕೆಯಲ್ಲಿ) ಅವನನ್ನು ಗಲಿಲಾಯ ಹಾಗೂ ಪೆರಿಯ ಪ್ರಾಂತಗಳ ಮೇಲೆ ಅಧಿಕಾರಿಯಾಗಿ ನೇಮಕಗೊಂಡನು (ಲೂಕ 3:1; ಮತ್ತಾಯ 14:1). ಅವನು ಯೇಸುವಿನ ಕಾಲದಲ್ಲಿ ಚಕ್ರಾಧಿಪತಿಯಾಗಿದ್ದರಿಂದ, ಅವನು ಪ್ರಸಿದ್ಧಿಗೊಂಡ ಅರಸನಾಗಿದ್ದನು. (3) ಫಿಲಿಪ್ಪನು ಅವನ ಮೂರನೆಯ ಮಗ, ಇತೂರಿಯ ಹಾಗೂ ಟ್ರಕೋನೀಯದ ಟೆಟ್ರಾರ್ಚನಾಗಿದ್ದನು[23] (ಲೂಕ 3:1; ನೋಡಿರಿ ಮತ್ತಾಯ 14:3) - ಅದನ್ನು ಬಾಷಾನ್ ಪ್ರಾಂತ ಎಂದು ಕರೆಯುತ್ತಿದ್ದರು.[24] (4) ಅಭಿಲೇನ್,[25] ಎಂಬ ನಾಲ್ಕನೆಯ ಪ್ರಾಂತವನ್ನು ಲಿಸೇನಿಯನಿಗೆ ನೀಡಲಾಯಿತು (ಲೂಕ 3:1), ಅವನು ಹೆರೋದನಾಗಿರಲಿಲ್ಲ. ಅಭಿಲೇನ್ ಎಂಬ ಪ್ರಾಂತವು ಹೆಓದ ಮಹಾರಾಜನಿಗೆ ಸೇರಿರಲಿಲ್ಲ.

ರೋಮಾಯರಿಗೆ ಯೆಹೂದ್ಯರಿಗೆ ಅನೇಕ ವಿಧವಾದ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದರು. ಅವರಿಗೆ ಸೈನ್ಯದಲ್ಲಿ ಸೇರಿಸಿಕೊಂಡಿರಲಿಲ್ಲ. ಸಬ್ಬತ್ ದಿನದಲ್ಲಿ ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿರಲಿಲ್ಲ. ಯಾವದೇ ವಿಧವಾದ ಮೂರ್ತಿಗಳ ಚಿತ್ರಗಳಿಲ್ಲದ ಸರಳವಾದ ತಾಮ್ರದ ಹಣವನ್ನು ಅವರು ಬಳಸಬಹುದಿತ್ತು.[26] ರೋಮಾಯರು ಅವರ ಮಾರ್ತಿಗಳ ಚಿತ್ರಗಳಿದ್ದ ಧ್ವಜಗಳನ್ನು ಯೆಹೂದ್ಯರ ಪ್ರಾಂತ್ಯದಲ್ಲಿ ಬಳಸುವ ಹಾಗಿರಲಿಲ್ಲ.

ಕ್ರಿಸ್ತನ ಬರುವಿಕೆಗಾಗಿ, ರೋಮಾಯರು ಸಿದ್ಧವಾದದ್ದು, ಕ್ರೈಸ್ತರಿಗೆ ಅಚ್ಚರಿ ಮೂಡಿಸುತ್ತದೆ. ಅಲ್ಲಿ *ರೋಮಾಯರ* ಸಮಾಧಾನ ಪರಿಸರವು ಸೃಷ್ಟಿಯಾಯಿತು. (ಗ್ರೀಕ್) ಭಾಷೆಯು ಸಾರ್ವತ್ರಿಕವಾಯಿತು, ಹೆದ್ದಾರಿಗಳ ನಿರ್ಮಾಣದಿಂದಾಗಿ, ಸಾಗಾಟ ಹಾಗೂ ಸಂಪರ್ಕ ವ್ಯವಹಾರವು ಪ್ರಬಲವಾಯಿತು.

## ಪಾಲೇಸ್ತೇನ್ ಪ್ರದೇಶ

ಹಳೇ ಒಡಂಬಡಿಕೆಯ ಪ್ರಕಾರ, ಯೇಸು ಜನಿಸಿದ ನಾಡನ್ನು "ಕಾನಾನ್" ಎಂದು ಕರೆಯಲಾಗ್ತಿ (ಆದಿಕಾಂಡ 12:5; ವಿಮೋಚನಕಾಂಡ 6:4; ಯೆಹೋಶುವ 14:1). ಹೊಸ ಒಡಂಡಿಕೆಯ ಕಾಲದಲ್ಲಿ ಆಸ್ಥವನ್ನು"ಪಾಲೆಸ್ತೇನ್"[27] ಎಂದು ಕರೆದರು. ಆದರೆ ಈ ಹೆಸರನ್ನು ಹೊಸ ಒಡಂಬಡಿಕೆಯಲ್ಲಿ ನಮೂದಿಸಿರುವುದಿಲ್ಲ.[28]

ಈ ಬರವಣಿಗೆಯ ಸರಣಿಯಲ್ಲಿ, ಯೇಸು ನಡೆದಾಡಿರುವ ಸ್ಥಳಗಳ ಪರಿಚಯದ ನಕ್ಷೆಯನ್ನು ನೀಡಲಾಗಿದೆ. ಯೇಸುವಿನ ಇತಿಹಾಸದಲ್ಲಿ ಸುಮಾರು 150 ಘಟನೆಗಳನ್ನ ಇದ್ದು, ಅದರಲ್ಲಿ ನೂರು ಘಟನೆಗಳ ಭೂಗೋಳಿಕ ಮಾಹಿತಿಯನ್ನು ನೀಡಲಾಗಿದೆ.

ಯೇಸು ಕ್ರಿಸ್ತನ ಜೀವನ ಕಾಲದಲ್ಲಿದ್ದ "ಪಾಲೇಸ್ತೇನಿನ" ಚಿತ್ರಣದ ಮೂಲಕ ಈ ವಿಚಾರವನ್ನು ಹೆಚ್ಚು ಗ್ರಹಿಸಬಹುದಾಗಿದೆ. ದಾನಿನಿಂದ ಬೆರ್ಷಬವೆಗೆ (ನ್ಯಾಯಾಸ್ಥಾಪಕ 20:1; ನೋಡಿ 1 ಸಮುವೇಲ 3:20; 1 ಅರಸು 4:25) ಎಂದು ನಮೂದಿಸಲಾಗಿದೆ. ದಾನಿನಿಂದ ಬೇರ್ಷೆಬದ ನಡುವೆ 150 ಮೈಲುಗಳ ಅಂತರವಿದೆ. 10,000ರಿಂದ 12,000 ಸಾವಿರ ಚಚ್ಚೌಕ ಮೈಲುಗಳ ವಿಸ್ತೀರ್ಣವಿದೆ.[29] ಅಮೇರಿಕದ ಐವತ್ತರಲ್ಲಿ, ನಲ್ವತ್ತರಷ್ಟಿದೆ.[30]

ಯೇಸುವಿನ ಕಾಲದಲ್ಲಿ, ಮೂರು ಪ್ರಾಂತಗಳು ಬಹು ಪ್ರಮುಖವಾಗಿದೆ, ಅವುಗಳು ಯೋರ್ದಾನಿನ ಪಶ್ಚಿಮ ದಿಕ್ಕಿಗಿದೆ. (1) *ಯೂದಾರ್ಯ.* ಇದು ಯೆಹೂದ್ಯರ ಆಡಳಿತದಲ್ಲಿತ್ತು, ಯೂದಾಯದವರು ತಮ್ಮ ಸಂಪ್ರದಾಯ ಪ್ರಭುತ್ವ ನೀಡಿದ್ದರು. ಹಬ್ಬಗಳ ದಿವಸಗಳಲ್ಲಿ ಯೇಸು ಈ ಪ್ರಾಂತವನ್ನು ಸಂಧಿಸುತ್ತಿದ್ದನು. (2) *ಸಮಾರ್ಯ.* ಅಲ್ಲಿ ಮಿಶ್ರವಾದ ಸಮಾರ್ಯರು ವಾಸಿಸಿದ್ದರು. ಉತ್ತರ ದಕ್ಷಿಣದ ಪ್ರವಾಸದ ಸಮಯಲ್ಲಿ ಯೇಸು ಈ ಸ್ಥಳವನ್ನು ಹಾದು ಹೋಗುತ್ತಿದ್ದನು. (3) *ಗಲಿಲಾಯ.* ಇಲ್ಲಿ ಯೆಹೂದ್ಯರು ಹಾಗೂ ಅನ್ಯರು ಒಟ್ಟಾಗಿ ವಾಸಿಸಿದ್ದರು (ನೋಡಿ ಮತ್ತಾಯ 4:15). ಯೆಹೂದ್ಯರು ಇದನ್ನು ಹಿಂದುಳಿದ ಪ್ರದೇಶವೆಂದು ಪರಿಗಣಿಸಿದ್ದರು. ಬಹಳಷ್ಟು ಕಾಲವನ್ನು ಯೇಸು ಗಲಿಲಾಯದಲ್ಲಿ ಕಳೆದಿದ್ದನು.

ಯೇಸು ಸಂಚರಿಸಿದ ಇನ್ನೂ ಅನೇಕ ಸ್ಥಳಗಳನ್ನು ಭೂಪಟದಲ್ಲಿ ತೋರಿ ಸಲಾಗಿದೆ. ಅನೇಕ ಸಾರಿ ಯೇಸು ಗಲಿಲಾಯ ಸಮುದ್ರವನ್ನು ದಾಟಿ "ಬಾಷಾನ್ ಪ್ರದೇಶಕ್ಕೆ ಹೋಗಿದ್ದನು"[31] ಲೂಕ 3:1ರ ಪ್ರಕಾರ, "ಇತುರಾಯ ಹಾಗೂ ತ್ರಕೋನೀತಿ" ಎಂಬ ಸ್ಥಳಗಳನ್ನು ಹೆಸರಿಸಲಾಗಿದೆ. ದಕ್ಷಿಣ ಭಾಗವನ್ನು "ದೆಕಪೋಲಿ" ಅಂದರೆ "ಹತ್ತು ಪಟ್ಟಣಗಳು"[32] ಎನ್ನಲಾಗಿದೆ (ಮತ್ತಾಯ 4:25; ಮಾರ್ಕ 5:20; 7:31).

ಸೇವೆಯ ಅಂತ್ಯದಲ್ಲಿ ಯೇಸು, ಗಲಿಲಾಯದಿಂದ ಅನೇಕ ಬಾರಿ ಹಿಂದಿರುಗಿದ್ದನು. ಥೈರ್ ಹಾಗು ಸಿದೋನಿನಿಂದಲೂ ಹಿಂದಿರುಗಿದ್ದನು, ಅವು ಫೋಯಿನಿಕೆಯಲ್ಲಿರುತ್ತವೆ (ಮತ್ತಾಯ 15:21). ಯೋರ್ದಾನಿನ ಪೂರ್ವದಿಂದಲೂ ಹಿಂದಿರಗಿದ್ದನು. ಯೋಸೇಫಸನ ಪ್ರಕಾರ "ಪೆರಿಯ" ಎಂದಿದ್ದರು. "ಸುವಾರ್ತೆಗಳಲ್ಲಿ ಯೋರ್ದಾನಿನ ಆಚೆ" ಎಂದು ಕರೆಯಲಾಗಿದೆ (ಮತ್ತಾಯ 4:25; 19:1; ಮಾರ್ಕ 10:1; ಯೋಹಾನ 10:40).

ಇತರೆ ಸ್ಥಳಗಳ ಕುರಿತು ಭೂಪಟದಲ್ಲಿ ತಿಳಿಸಲಾಗಿದೆ. ಪ್ರತಿ ಪಾಠದಲ್ಲೂ, ಘಟನೆಗಳು ಜರುಗಿದ ಸ್ಥಳದ ಕುರಿತು ತಿಳಿಸಲಾಗುತ್ತದೆ.

ಈ ಭೂಪಟಗಳ ಕುರಿತು ಒಂದು ಎಚ್ಚರಿಕೆಯನ್ನು ನೀಡಲಾಗಿದೆ: ದೈವಶಾಸ್ತ್ರದ ಹಾಗೂ ಪ್ರಾಪಂಚದ ಪ್ರಕಾರವಾಗಿ, ಸ್ಥಳಗಳ ಮೂಲ ವಿಭಜನೆಗಳನ್ನು ಸಾಧ್ಯವಾದಷ್ಟು

ನಿಖರವಾಗಿ ತಿಳಿಸಲು ಪ್ರಯತ್ನಿಸಿದ್ದರೂ, ಸ್ಥಳಗಳ ನಿಖರವಾದ ವಿಸ್ತೀರ್ಣವು ಸ್ಪಷ್ಟವಾಗಿರುವದಿಲ್ಲ, ಅಂದಾಜಿನಂತೆ ನೀಡಲಾಗಿದೆ.

## ಇತರೆ ಬದಲಾವಣೆಗಳು

ಹಳೆಯ ಹಾಗೂ ಹೊಸ ಒಡಂಬಡಿಕೆಗಳ ನಡುವಿನ ಅಂತ್ಯದ ವರ್ಷಗಳು ಸಹ ಯೆಹೂದ್ಯ ಪ್ರಪಂಚದ ಮೇಲೆ ಪರಿಣಾಮವನ್ನು ಬೀರಿರುತ್ತದೆ.

### ನಾಮಾಂಕಿತದಲ್ಲಿ ಬದಲಾವಣೆ

ಹಳೇ ಒಡಂಬಡಿಕೆಯ ಅಂತ್ಯದಲ್ಲಿ ದೇವ ಜನರಿಗೆ "ಯೆಹೂದ್ಯರೆಂಬ" ನಾಮಾಂಕಿತವನ್ನು ಪಡೆದಿದ್ದರು (ಎಜ್ರಯೇಲ 4:12; 5:1). ದಕ್ಷಿಣದ ಯುದಾಯವು ಈನಮದ ಉಗಮವಾಗಿದೆ. ಬಾಬೇಲಿನಿಂದ ಹಿಂದಿರುಗಿದವರು ಈ ಪ್ರದೇಶದವರಾಗಿದ್ದರು. ಹೊಸ ಒಡಂಬಡಿಕೆಯ ಸಮಯದಲ್ಲಿ ಆ ಜನರಿಗೆ "ಯೆಹೂದ್ಯರೆಂದು" ಅಧಿಕೃತ ಹೆಸರಾಯಿತು (ಮತ್ತಾಯ 2:2; ಯೋಹಾನ 1:19).

ಆಗಾಗ್ಗೆ "ಇಸ್ರಾಯೇಲಿನ" (ನೋಡಿರಿ ಯೋಹಾನ 1:47; 2 ಕೊರಿಂಥ 11:22). ವಂಶದವರು ಎಂಬ ಸೂಚನೆ. ಕೆಲವು ಸಾರಿ ಅವರನ್ನು "ಇಬ್ರಿಯರು" ಎಂದು ಕರೆದರು (ಅಪೊಸ್ತಲರ ಕೃತ್ಯಗಳು 6:1; 2 ಕೊರಿಂಥ 11:22). ಯಾಕೆಂದರೆ ಅವರ "ಇಬ್ರಿಯ" ಅವರ ಸಾಂಪ್ರದಾಯಕ ಭಾಷೆಯಾಗಿತ್ತು.

### ಭಾಷೆಯಲ್ಲಿನ ಬದಲಾವಣೆ

ಅವರೆಲ್ಲರು ಬಾಬೇಲಿನ ಸೆರೆಯಿಂದ ಹಿಂದಿರುಗಿದ ನಂತರ, ಅರಾಮ್ಯ ಭಾಷೆಯ ಬದಲು ಇಬ್ರಿಯ ಭಾಷೆಯನ್ನು ತಮ್ಮ ಸಾಮಾನ್ಯ ಭಾಷೆಯನ್ನಾಗಿ ಮಾಡಿಕೊಂಡರು, ಸಿರಿಯನ್ನರ ಅರಾಮ್ಯ ಭಾಷೆಯು, ಇಬ್ರಿಯ ಭಾಷೆಯಂತೆಯೇ ಇತ್ತು, ಲಾತೀನ ಭಾಷೆಯು, ಇತಾಲ್ಯ ಭಾಷೆಯಂತಿದೆ. ಇವರು ಅಭ್ಯಾಸ ಮಾಡುವಂತೆ, ಯೆಹೂದ್ಯರು ಶಾಲೆಗಳಲ್ಲಿ ಇಬ್ರಿಯ ಭಾಷೆಯನ್ನು ಬಳಸಿದರು.

ಯೇಸುವಿನ ಕಾಲದಲ್ಲಿ, ಗ್ರೀಕ್ ಭಾಷೆಯು ಸಾರ್ವತ್ರಿಕ ಭಾಷೆಯಾಗಿದ್ದು, ರೋಮಾ ಸರ್ಕಾರದವರು ಲಾತೀನ್ ಭಾಷೆಯನ್ನು ಉಪಯೋಗಿಸುತ್ತಿದ್ದರು. ಶಿಲುಬೆಯ ಮೇಲೆ ಯೇಸು ಮೊಳೆಗಳಿಂದ ಜಡಿಯಲ್ಪಟ್ಟಾಗ, ಆತನ ತಲೆಯ ಮೇಲೆ, ಇಬ್ರಿಯ ಲಾತೀನ್ ಹಾಗೂ ಗ್ರೀಕ್ ಭಾಷೆಯ ತಲೇ ಬರಹವನ್ನು ಬರೆದಿದ್ದರು (ಯೋಹಾನ 19:20).

### ವೃತ್ತಿ ಬದಲಾವಣೆ

ಸೆರೆಯ ಮೊದಲು, ಯೆಹೂದ್ಯರು ದನ ಮೇಯಿಸುವವರು ಹಾಗೂ ವ್ಯವಸಾಯ ಮಾಡುತ್ತಿದ್ದರು. ಸೆರೆ ಹೊದದ್ದರಿಂದ ತಮ್ಮ ಸ್ವಾಸ್ತವನ್ನು ಕಳಕೊಂಡದ್ದರಿಂದ, ಅವರು ವ್ಯಾಪಾರವನ್ನು ಮಾಡುತ್ತಿದ್ದರು. ಯೇಸುವಿನ ಕಾಲದಲ್ಲಿ, ಯೆಹೂದ್ಯರು ಪ್ರಪಂಚದಾದ್ಯಂತ ವ್ಯಾಪಾರವನ್ನು ವಿಸ್ತರಣೆ ಮಾಡಿಕೊಂಡರು.

### ಆರಾಧನೆಯಲ್ಲಿ ಬದಲಾವಣೆ

ಯೆರೂಸಲೇಮಿನ ದೇವಾಲಯವು ಯೆಹೂದ್ಯರಿಗೆ ಪ್ರಮುಖವಾಗಿತ್ತು. ಬಾಬೇಲಿನಿಂದ ಹಿಂದಿರುಗಿದಾಗ, ಜೆರುಬಾಬೇಲನು ಕಟ್ಟಿಸಿದ ದೇವಾಲಯವನ್ನು ಎಪಿಫೇನನು ನಾಶಮಾಡಿದ್ದನು ಯೇಸುವಿನ ಜನನದ 16 ವರ್ಷಗಳ ಹಿಂದೆ, ಹೆರೋದ ಮಹಾರಾಜನು ದೇವಾಲಯವನ್ನು ಕಟ್ಟಲು ಆರಂಭಿಸಿದನು (ನೋಡಿ ಯೋಹಾನ 2:20), ಯೇಸುವಿನ ಕಾಲದಲ್ಲೂ ಈ

ಯೋಜನೆಯು ಪ್ರಗತಿಯಲ್ಲಿತ್ತು.[33] ಯೆಹೂದ್ಯರಲ್ಲಿ ನಂಬಿಗಸ್ತರಾ ದವರು ವಿವಿಧ ಹಬ್ಬಗಳಿಗಾಗಿ ಯೆರಸಲೇಮನ್ನು ಆಗಾಗ್ಗೆ ಸಂಧಿಸುತ್ತಿದ್ದರು.[34] ಇತರೆ ಸ್ಥಳದ ಯೆಹೂದ್ಯರು ಸಹ, ಕಾಲದಿಂದ ಕಾಲಕ್ಕೆ ಯೆರೂಸಲೇಮಿಗೆ ಹೋಗುತ್ತಿದ್ದರು (ಅಪೊಸ್ತಲರ ಕೃತ್ಯಗಳು 2:5-11).

ಯೇಸುವಿನ ಕಾಲದಲ್ಲಿ ದೇವ ಮಂದಿರವು ಯೆಹೂದ್ಯರಿಗೆ ಪ್ರಮುಖವಾಗಿತ್ತು ಹಳೇ ಒಡಂಬಡಿಕೆಯಲ್ಲಿ ಮಂದಿರದ ಹೆಸರು ಇಲ್ಲದೆ ಹೋದರೂ, ಹೊಸ ಒಡಂಬಡಿಕೆಯ ಕಾಲದಲ್ಲಿ ಅದು ಪ್ರಮುಖವಾಯಿತು (ಮತ್ತಾಯ 12:9; 13:54). ಯೆಹೂದ್ಯರು ಸೆರೆ ಒಯ್ಯಲ್ಪಟ್ಟ ಸಂದರ್ಭದಲ್ಲಿ, ಅವರು ಯೆರೂಸಲೇಮಿಗೆ ಹೋಗುವ ಅವಕಾಶ ಇಲ್ಲದೆ ಇದ್ದದ್ದರಿಂದ, ಮಂದಿರಗಳನ್ನು ಮಾಡಿಕೊಂಡಿರಬಹುದು.[35] ಮತ್ತು ಯೆಹೂದ್ಯರು ಒಡಗೂಡಿ ಒಂದು ಮಂದಿರವನ್ನು ಮಾಡಬಹುದಿತ್ತು. ಮಂದಿರದಲ್ಲಿ, ಸಬ್ಬತ್ ಆಚರಣೆಯು ಬಹು ಸರಳವಾಗಿತ್ತು. ಅಲ್ಲಿ ಅವರು ಹಾಡುಗಳನ್ನು ಹಾಡಿ, ಪ್ರಾರ್ಥನೆಯನ್ನು ಹಾಗು ವಾಕ್ಯ ಧ್ಯಾನವನ್ನು ಮಾಡುತ್ತಿದ್ದರು.[36] ಯೆಹೂದ್ಯ ಮಂದಿರದಲ್ಲಿ ಸ್ಥಾಪನೆಗೊಂಡಿದ್ದ ವೇದ ಶಾಲೆಗೆ ಗಂಡು ಮಕ್ಕಳು ಹಾಜರಾಗುತ್ತಿದ್ದರು.

**ಧಾರ್ಮಿಕ ನಾಯಕತ್ವದಲ್ಲಿ ಬದಲಾವಣೆ**

ಹಳೆಯ ಒಡಂಬಡಿಕೆಯ ಕಾಲದಲ್ಲಿ, ಯಾಜಕರು ಧಾರ್ಮಿಕ ನಾಯಕರಾಗಿದ್ದರು. ಕೆಲ ಸಂದರ್ಭಗಳಲ್ಲಿ, ಪ್ರವಾದಿಗಳು ಅವರಿಗೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಯೇಸುವಿನ ಜೀವನ ಚರಿತ್ರೆಯ ಅಧ್ಯಯನದಲ್ಲಿ, ಯಾಜಕರ ಹಾಗೂ ಲೇವಿಯರ ಕಾರ್ಯಗಳ ಕುರಿತು ಗಮನಿಸುತ್ತೇವೆ (ಲೂಕ 10:31, 32). ಯೇಸುವಿನ ಕಾಲದಲ್ಲೂ ಸಹ ಯೆಹೂದ್ಯ ಧರ್ಮದಲ್ಲಿ *ಇಬ್ಬರು* ಮಹಾ ಯಾಜಕರುಗಳನ್ನು ಗಮನಿಸುತ್ತೇವೆ (ನೋಡಿ ಲೂಕ 3:2). ಯಾಜಕನಾದ ಅನನೀಯನನ್ನು, ರೋಮಾಯ ಅಧಿಕಾರಿಗಳು, ಅಧಿಕಾರದಿಂದ ಇಳಿಸಿದ್ದರು. ಆದರೆ ಅವನು ತನ್ನ ಅಳಿಯನಾದ ಕಾಯಫನನು ಅಧಿಕಾರಕ್ಕೆ ತರುವ ವರ್ಚಸ್ಸನ್ನು ಹೊಂದಿದ್ದನು (ಯೋಹಾನ 18:13) (ಮತ್ತಾಯ 26:3, 57; ಯೋಹಾನ 11:49; 18:24). ಅನೇಕರಾದ ಯೆಹೂದ್ಯರಲ್ಲಿ ಯಾಜಕನಾದ ಅನನೀಯನು ಮನೆ ಮಾತಾಗಿದ್ದನು (ನೋಡಿ ಅಪೊಸ್ತಲರ ಕೃತ್ಯಗಳು 4:6).

ಯಾಜಕರೊಂದಿಗೆ, ಇತರೆ ನಾಯಕತ್ವವನ್ನು ಹೊಸ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ. ಅದರಲ್ಲಿ ರಬ್ಬಿಗಳು ಮೊದಲಿಗರು (ಮತ್ತಾಯ 23:7, 8),[37] ಅವರು ಮಂದಿರದ ಹಾಗೂ ಮಂದಿರದಲ್ಲಿನ ಶಾಲೆಗಳಲ್ಲಿ ಉಪದೇಶಕರಾಗಿದ್ದರು ಯಾಜಕರಿಗಿಂತಲೂ ಹುಚ್ಚನ ಅಧಿಕಾರವನ್ನೂ ಪಡೆದಿದ್ದರು ಕೆಲವು ಹೇಳಿಕೆಗಳು ಪ್ರಕಾರ ಇವರ ಮಾತುಗಳು ಗ್ರಂಥಗಳ ಹೇಳಿಕೆಗಳಂತೆ ಬಲಪ್ರದವಾಗಿದ್ದವು.[38]

ನಂತರದಲ್ಲಿ ಸದ್ದುಕಾಯರು (ಮತ್ತಾಯ 2:4; 5:20; 7:29; 9:3). "ಸದ್ದು ಕಾಯರು" ಎಂದರೆ ಗ್ರೀಕ್ ಪದದ ಬರಹಗಾರರು ಎಂಬ ಅರ್ಥ. ಅವರು ಮೂಲತಃ ಪ್ರಮುಖವಾದ ಘಟನೆಗಳನ್ನು ದಾಖಲು ಮಾಡುವವರಾಗಿದ್ದರು.[39] ಹೊಸ ಒಡಂಬಡಿಕೆಯ ಕಾಲದಲ್ಲಿ ಇವರು ಹಳೇ ಒಡಂಬಡಿಕೆಯ ಪ್ರತಿಗಳನ್ನು ಮಾಡಿದ್ದರು. ಗ್ರಂಥಗಳ ಅಧಿಕಾರವನ್ನು ಹೊಂದಿದವರಾಗಿ, "ನಿಯಮಾವಳಿಗಳ ಬರಹಗಾರರು" ಎಂದು ಕರೆಯಿಸಿಕೊಂಡಿದ್ದರು (ಲೂಕ 7:30; 11:45, 46, 52).[40] ಅವರು ಸಾರ್ವಜನಿಕ ನಿಯಮಗಳಲ್ಲಿ ಅನುಭವಿಗಳಲ್ಲದಿದ್ದರೂ, ಧಾರ್ಮಿಕ ವಿಧಿಗಳಲ್ಲಿ ಅನುಭವಿಗಳಾಗಿದ್ದರು. ಅವರಲ್ಲಿ ಅನೇಕರು ಫರಿಸಾಯರಾಗಿದ್ದರು (ಮುಂದೆ ಚರ್ಚಿಸಿರುವ ಫರಿಸಾಯರ ವಿಚಾರವನ್ನು ಗಮನಿಸಿ).

ಹಿರೀ ಸಭೆಯವರು ಎಂಬ ಮತ್ತೊಂದು ಗುಂಪು. ಅವರು ಯೆಹೂದ್ಯರ "ಉಚ್ಚ ನ್ಯಾಯಾಲಯ" ಅದನ್ನು ಗ್ರೀಕ್ ಭಾಷೆಯಲ್ಲಿ "ಪರಿಷತ್ತು" ಎಂದು KJV ಮತ್ತು NASB ಅನುವಾದಿಸಲಾಗಿದೆ (ಮತ್ತಾಯ 26:59; ಮಾರ್ಕ 15:43; ಲೂಕ 22:66) ಆದರೆ ಹೊಸ

ಒಡಂಬಡಿಕೆಯಲ್ಲಿ NIVಯಲ್ಲಿ "ಹಿರೀಸಭೆ" ಎನ್ನಲಾಗಿದೆ. ಕ್ರಿ.ಪೂ. 200ರಲ್ಲಿ "ಹಿರಿಸಭೆ" ಎಂಬ ಮೂಲವನ್ನು ಗಮನಿಸುತ್ತೇವೆ. ಯೆಹೂದ್ಯ ಜನಾಂಗವನ್ನು ಅಂತರಿಕವಾಗಿ ಆಳುವ ಒಂದು ಗುಂಪು, ಸಾಂಪ್ರದಾಯಿಕವಾಗಿ "ಎಪ್ಪತ್ತು ಜನರನ್ನು" ಹೊಂದಿದ್ದ ಒಂದು ಗುಂಪು ಅದರಲ್ಲಿ ಹೆಚ್ಚಿನ ಮಂದಿ ಸದ್ದುಕಾಯರಾಗಿದ್ದರು ("ಸದ್ದುಕಾಯರ ಕುರಿತ ಚರ್ಚೆಯನ್ನು" ಗಮನಿಸಿ). ಪರಿಸಾಯರ ಇನ್ನೊಂದು ಪಂಥವನ್ನು ನೋಡುತ್ತೇವೆ.

## ಇತರೆ ಪಂಥಗಳ ಉದ್ಭವ

ಈ ಎಲ್ಲಾ ಪಂಥಗಳು, ಯೆಹೂದ್ಯರಿಗೆ ಅತಿ ಪ್ರಮುಖವಾಗಿದ್ದವು. ಅವರಲ್ಲಿ ಯೇಸುವಿನ ವಿರೋಧಿಳಾಗಿದ್ದರು, ರಾಜಕೀಯ ಪ್ರೇರಿತವಾಗಿದ್ದವು.

### ಪರಿಸಾಯರು

ಯೇಸುವಿನ ಕಾಲದಲ್ಲಿ, ಯೆಹೂದ್ಯರ ಈ ಪಂಥಗಳು ಪ್ರತಿಶ್ಚಿತವಾಗಿದ್ದವು. ಯೆಹೂದ್ಯರು ಗ್ರೀಕರ ಸಂಸ್ಕೃತಿಯನ್ನು ಅಂಗಿಕರಿಸಬೇಕು ಎಂಬ ಒತ್ತಡದ ಸಮಯದಲ್ಲಿ, ಇಂಥ ಪಂಥಗಳು ಉದ್ಭವಗೊಂಡವು. ಮೂಲತ ಫರಿಸಾಯರು ಧಾರ್ಮಿಕ ಹಾಗೂ ದೇಶ ಪ್ರೇಮವನ್ನು ಹೊಂದಿದ್ದರು. ಆದರೆ ಯೇಸುವಿನ ಕಾಲದಲ್ಲಿ ಅವರು ಸ್ವ ನೀತಿಯನ್ನು ಪದ್ಧತಿಗಳನ್ನು ಅಳವಡಿಸಿಕೊಂಡರು (ಮತ್ತಾಯ 23:1-36). ಅವರ ಗುಂಪು ಚಿಕ್ಕದಾಗಿದ್ದರೂ, ಜನರಲ್ಲಿ ಪ್ರಸಿದ್ಧಿಪಡೆದಿದ್ದರು, ಹಾಗೂ ಪ್ರಭಾವಿಗಳಾಗಿದ್ದರು. ಸಕಲ ಕಾರ್ಯಗಳೂ "ಪ್ರೇರಿತವಲ್ಲದ ಹಿರಿಯರ ಸಂಪ್ರದಾಯಗಳನ್ನು ಅಳವಡಿಸುತ್ತಿದ್ದರು" (ಮಾರ್ಕ 7:3). ಅವುಗಳ ಧರ್ಮಶಾಸ್ತ್ರಕ್ಕೆ ಸಮನಾಗಿದ್ದವು. ಯೇಸು ಈ ಸಂಪ್ರದಾಯಗಳಿಗೆ ಆಧ್ಯತೆ ನೀಡದೆ ಇದ್ದದರಿಂದ, ಅವರು ಯೇಸುವಿಗೆ ವಿರೋಧಿಗಳಾದರು (ಮತ್ತಾಯ 15:1-14).

### ಸದ್ದುಕಾಯರು

ಸೋಲೋಮೋನನ ಕಾಲದ ಯಾಜಕನಾದ ಜಾದೋಕನ ವಂಶವು ಸದ್ದುಕಾಯರ ಮೂಲವಾಗಿದ್ದಾನೆ (1 ಅರಸು 1:32, 34, 38, 45; ನೋಡಿರಿ ಯೆಹೋಶುವ 40:46; 44:15). ಹೆರೋದನ ಸಮಯದಿಂದ, ಯೆರೂಸಲೇಮಿನ ನಾಶನದವರೆಗೆ ಸದ್ದುಕಾಯರು ಮಾತ್ರ ಯಾಜಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರು ಐಶ್ವರ್ಯವಂತರೂ, ಜ್ಞಾನಿಗಳೂ ಆಗಿದ್ದರು, ಅವರಲ್ಲಿ ಅನೇಕರು ಯಾಜಕರಾಗಿದ್ದರು. ಫರಿಸಾಯರು ಉದ್ಭವವಾದ ಕಾಲದಿಂದಲೂ, ಸದ್ದುಕಾಯರು ಇದ್ದರು ಎಂಬದು ಕೆಲವರ ನಂಬಿಕೆ. ಅಧಿಕಾರವಿದ್ದವರ ಸಂಗಡ ಉತ್ತಮವಾದ ಒಡನಾಟವಿದ್ದರಿಂದ, ಇವರು ಸಹ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿದರು. ಅವರು ಗ್ರೀಕ್ ಸಂಪ್ರದಾಯವನ್ನು ಅಂಗೀಕರಿಸಿದ ಕಾರಣದಿಂದ, ಪುನರುತ್ಥಾನದ ಕುರಿತು ಅಪನಂಬಿಕೆ ವ್ಯಕ್ತಪಡಿಸಿದ್ದರು (ಮಾರ್ಕ 12:18; ಅಪೊಸ್ತಲರ ಕೃತ್ಯಗಳು 23:6-8). ಯೇಸು ಅವರ ಅಧಿಕಾರಕ್ಕೆ ಒಳಗಾಗದೆ ಇದ್ದದರಿಂದ, ಅವರು ಯೇಸುವಿನ ವೈರಿಗಳಾದರು.

### ಇತರೆ ಪಂಥಗಳು

ಸುವಾರ್ತೆಗಳಲ್ಲಿ ದಾಖಲಾಗಿರುವ ಇತರೆ ಪಂಥಗಳನ್ನು ಸಹ ಗಮನಿಸುತ್ತೇವೆ. ಹೆರೋದ್ಯರೆಂಬ (ಮತ್ತಾಯ 22:16; ಮಾರ್ಕ 3:6; 12:13; ನೋಡಿರಿ ಮಾರ್ಕ 8:15). ರಾಜಕೀಯ ಪಂಥವು ಹೆರೋದನನ್ನು ಪಾಲೇಸ್ತೀನಿನ ಸರ್ವಾಧಿಕಾರಿಯಾಗಿ ಮಾಡ ಬೇಕೆಂದು ನಿರ್ಧರಿಸಿದ್ದರು.

ಯೆಹೂದ್ಯರಿಂದ ಪ್ರತ್ಯೇಕಗೊಂಡ ಮತಾವಲಂಭಿಗಳು, ರೋಮಾಯರನ್ನು ಕತ್ತಿಯಿಂದ

ಹತಮಾಡಿ ಅವರನ್ನು ಜಯಿಸಬೇಕೆಂದಿದ್ದರು. ಈ ಗುಂಪಿಗೆ ಸೇರಿದ ಸಿಮೋನನು ಯೇಸುವಿನ ಶಿಷ್ಯರಲ್ಲಿ ಒಬ್ಬನಾದನು (ಮತ್ತಾಯ 10:4; ಮಾರ್ಕ 3:18; ಲೂಕ 6:15).

ಅದೇ ರೀತಿಯಲ್ಲಿ ಧಾರ್ಮಿಕ ತೀವ್ರವಾದಿಗಳಾದ "ಎಸೆನ್ನರು" ಇದ್ದರು. ಅವರು ತಮ್ಮನ್ನು ಸಮಾಜದಿಂದ ಪ್ರತ್ಯೇಕ ಮಾಡಿಕೊಂಡಿದ್ದರು. (ಅವರು ಫರಿಸಾಯರಲ್ಲಿನ ಒಳಪಂಥವಿರಬಹುದು.) ಕುಮ್ರಾನ ಸಮಾಜದವರು (ಸತ್ತ ಸಮುದ್ರದ ಗ್ರಂಥಗಳ ಪ್ರಖ್ಯಾತಿಗೊಂಡವರು) ಇವರಾಗಿರಬಹುದು ಎಂಬುದು ಹಲವರ ನಂಬಿಕೆ "ಎಸೆನ್ನರು" ಎಂಬ ಪದವನ್ನು ಸತ್ಯವೇದದಲ್ಲಿ ತಿಳಿಸಿರುವದಿಲ್ಲ. ಎಸೆನ್ನರ ಸಂಪ್ರದಾಯವನ್ನು ಸ್ನಾನಿಕನಾದ ಯೋಹಾನನು ಅನುಸರಿಸಿದ್ದನು ಎಂಬ ಹೇಳಿಕೆಯನ್ನು ಅಲ್ಲಗಳೆಯುವ ಸಲುವಾಗಿ ನಾನು ಇದನ್ನು ತಿಳಿಸಿದ್ದೇನೆ. ಇದಕ್ಕೆ ಯಾವುದೇ ಪುರಾವೆಗಳಿರುವದಿಲ್ಲ.[41]

## ಮೆಸ್ಸೀಯನ ನಿರೀಕ್ಷೆಯಲ್ಲಿ

ಯೆಹೂದ್ಯರು ಮೆಸ್ಸೀಯನನ್ನು ನಿರೀಕ್ಷಿಸಿದ್ದರು ಎಂಬ ಪ್ರವಚನದ ಮೊದಲ ಪಾಠವನ್ನು ತಿಳಿಸಿದ್ದೇನೆ. ಮತ್ತಾಯನ ಹೇಳಿಕೆಯಂತೆ,

> "ಮೆಸ್ಸಿಯನು" ಅಂದರೆ ಇಬ್ರಿಯ ಭಾಷೆಯಲ್ಲಿ ಅಭಿಷೇಕ ಹೊಂದಿದವನು. ಗ್ರೀಕ್ ಅನುವಾದದಲ್ಲಿ "ಕ್ರಿಸ್ತನು" (ಯೋಹಾನ 1:41). ಯಾಜಕರ ನೇಮಕದಲ್ಲಿ ಅಭಿಷೇಕ ಮಾಡುತ್ತಿದ್ದರು. ಆದರೆ ಯೆಹೂದ್ಯರು "ಅಭಿಷೇಕ" ಎಂಬ ಪದವನ್ನು ಕೇಳಿದಾಗ, ಅವರು "ಅರಸನ" ಕುರಿತು ಯೋಚಿಸಿದರು (1 ಸಮುವೇಲ 10:1; 24:6; ಕೀರ್ತನೆ 2:2, 6).

ಅಂತಿಮವಾಗಿ ಯೇಸು ಆಗಮಿಸಿದಾಗ, ಅವರು ಯೇಸುವಿನ ಬರೋಣಕ್ಕಾಗಿ ತೀವ್ರವಾದ ಭರವಸೆಯಲ್ಲಿದ್ದರು. ಸೀಮೋನ ಹಾಗೂ ಅನ್ನ ಇವರ ಆನಂದದಲ್ಲಿ ಈ ತೀವ್ರತೆಯ ಆಸಕ್ತಿಯನ್ನು ಗಮನಿಸುತ್ತೇವೆ. ಅವರು ಯೇಸುವನ್ನು ದೇವಾಲಯದಲ್ಲಿ ಆನಂದದಿಂದ ಬರಮಾಡಿಕೊಂಡರು (ಲೂಕ 2:25-38). ಸಿಮೋನನು ಸಹ ಕ್ರಿಸ್ತನಿಗಾಗಿ ಕಾಯುತ್ತಿದ್ದನು (ಲೂಕ 2:26). ಅವನು ಯೆರೂಸಲೇಮಿನ ಬಿಡುಗಡೆಗಾಗಿ ಕಾದಿದ್ದನು (ಲೂಕ 2:38). ಸ್ನಾನಿಕನಾದ ಯೋಹಾನನು ಸೇವೆಯನ್ನು ಆರಂಭ ಮಾಡಿದಾಗ, ಇವನೇ ಕ್ರಿಸ್ತನಿರಬಹುದೇ ಎಂದು ಜನರು ಅಂದುಕೊಂಡಿದ್ದರು (ಲೂಕ 3:15). ಸಮಾರ್ಯರು ಸಹ "ಮೆಸ್ಸೀಯನು ಬರುವನೆಂದು" ನಂಬಿದ್ದರು (ಯೋಹಾನ 4:25). ಅರಿಮಥಾಯದ ಯೋಸೇಫನ ಸಹ ದೇವರ ರಾಜ್ಯವನ್ನು ಎದುರು ನೋಡುತ್ತಿದ್ದನು (ಲೂಕ 23:51). ಯೇಸುವನ್ನು ಕಿರೀಟಧಾರಿಯಾಗಿ ಮಾಡಬೇಕೆಂಬ ಜನರ ಬಯಕೆಯನ್ನು ಗಮನಿಸುತ್ತೇವೆ (ಯೋಹಾನ 6:15). ಯೇಸು ಯೆರೂಸಲೇಮನ್ನು ಪ್ರವೇಶಿಸುವಾಗಲೂ ಇದನ್ನು ಗಮನಿಸುತ್ತೇವೆ (ಯೋಹಾನ 12:13).

ಯೇಸುವಿನ ಬರೋಣದ ನಿರೀಕ್ಷೆಯು ಚರ್ಚೆಗೆ ಯೋಗ್ಯವಾಗಿದೆ. ಆತನ ಹಿನ್ನಲೆಯ ಕುರಿತು, ಆತನು ದಾವೀದನ ವಂಶದವನು (ಮತ್ತಾಯ 22:42), ಆತನು ಬೆತ್ಲೆಹೇಮಿನಲ್ಲಿ ಜನಿಸುವನು (ಮತ್ತಾಯ 2:5, 6; ಯೋಹಾನ 7:42). ಆತನಿಗೆ ಮುಂದಾಗಿ ಮಾರ್ಗ ಸಿದ್ಧ ಮಾಡುವವನ ಕುರಿತು (ನೋಡಿ ಯೋಹಾನ 1:21; ಮತ್ತಾಯ 16:14). ಜನರ ನಿರೀಕ್ಷೆಯನ್ನು ಸುಳ್ಳು ಮಾಡುವ ಸಲುವಾಗಿ "ಸುಳ್ಳು ಮೆಸ್ಸೀಯರು" ಸಹ ಇದ್ದರು.[42]

ಈ ನಿರೀಕ್ಷೆಗಳ ನಡುವೆ, ಯೋಹಾನನ ಮಾತುಗಳು ಅರ್ಥವಾಗದೆ ಇರಬಹುದು: "ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು; ಆದರೆ ಸ್ವಂತ ಜನರು ಆತನನ್ನು ಅಂಗೀಕರಿಸಲಿಲ್ಲ" (ಯೋಹಾನ 1:11). ಯೆಹೂದ್ಯರಿಂದ ಯೇಸು ತಿರಸ್ಕರಿಸಲ್ಪಟ್ಟ ವಿಚಾರ ಸಹಜವಾಗಿತ್ತು ಹೊಸ ಒಡಂಬಡಿಕೆಯಲ್ಲಿ ಯೆಹೂದ್ಯ ನಾಯಕತ್ವವು ಪ್ರಮುಖವಾಗಿತ್ತು (ಮತ್ತಾಯ 21:42; ಮಾರ್ಕ

12:10; ಲೂಕ 17:25; ಅಪೊಸ್ತಲರ ಕೃತ್ಯಗಳ 4:11; 1 ಪೇತ್ರ 2:4, 7). ಯೇಸುವನ್ನು ಬಹು ನಿರೀಕ್ಷಿತನಾದವನ್ನು ಎಂದು ಏಕೆ ನಂಬಲಿಲ್ಲ?

ಯಾಕೆಂದರೆ ಯೇಸುವಿನ ಕುರಿತಾಗಿ ಅವರು ತಪ್ಪು ಅಭಿಪ್ರಾಯಗಳನ್ನು ಹೊಂದಿದ್ದರು. ಹಳೆ ಒಡಂಬಡಿಕೆಯ ಪ್ರಕಾರ ದೇವರೆ ಮೆಸ್ಸೀಯನು, ಕಳುಹಿಸಲ್ಪಟ್ಟ ಅರಸನು (ಯೆಶಾಯ 9:6, 7). ಆತನು ದಾವೀದನ ರಾಜಮನೆತನದವನು (ಕೀರ್ತನೆ 89:3, 4). ಆತನ ಬಾಧಿತನಾದ ಸೇವಕನು ಎಂದ ಹಳೇ ಒಡಂಬಡಿಕೆಯು ಸಹ ತಿಳಿಸುತ್ತದೆ (ಕೀರ್ತನೆ 22:1-21; ಯೆಶಾಯ 53:1-12). ಈ ಕುರಿತ ಪ್ರವಾದನೆ ಗಳನ್ನು ಸಹ ಅವರು ನಿರಾಕರಿಸಿರುವರು. ರೋಮಾಯರನ್ನು ಸೋಲಿಸಿ. ಬಲವಾದ ಇಸ್ರಾಯೇಲ್ ಸಾಮ್ರಾಜ್ಯವನ್ನು ಸ್ಥಾಪಿಸುವ ಬಲವಾದ ಮೆಸ್ಸೀಯನು ಒಂದು ದಾವೀದ ಹಾಗೂ ಸೋಲೋಮೋನನಿಗೆ ವಾಗ್ದಾನ ಮಾಡಿದ ರಾಜ್ಯ ಸ್ಥಾಪನೆ ಮಾಡುವನು ಎಂದು ಯೆಹೂದ್ಯರು ನಂಬಿದ್ದರು. ಆದರೆ ಕ್ರಿಸ್ತನ ಪ್ರಕಾರ, "ಈ ಲೋಕವು ನನ್ನ ರಾಜ್ಯವಲ್ಲ" (ಯೋಹಾನ 18:36ಎ). ಯೇಸು ವೃತ್ತಾಕಾರದ ಗೂಟದಂದಿದ್ದು, ಯೆಹೂದ್ಯರ ತದ್ವಿರುದ್ಧವಾದ ಆಲೋಚನೆಂಬ ಚಚೌಕದ ರಂಧ್ರವನ್ನು ತುಂಬಲು ಅಸಾಧ್ಯವಾಯಿತು.

## ಮುಕ್ತಾಯ

ಯೇಸುವಿನ ಜೀವನ ಕಾಲದ ಇತರೆ ವಿವರಗಳನ್ನು ನೀಡಬಹುದು. ಸಾಧಾರಣ ವಾದ ಯೆಹೂದ್ಯರ ಜೀವಿ ಬಗ್ಗೆಯೂ ತಿಳಿಸಬಹುದು. ಅವುಗಳನ್ನು ಸುವಾರ್ತೆಗಳಲ್ಲಿ ಬರುವ ಸಮಯದಲ್ಲಿ ವಿವರಿಸಲಾಗುವದು.

ಯೇಸು ಆಗಮಿಸಿದ ಕಾಲದ ಕುರಿತಾಗಿ, "ಒಣ ನೆಲದೊಳಗೆ ಬೇರಿನಿಂದ ಹೊರಡುವ ಅಂತರದಂತೆಯ" (ಯೆಶಾಯ 53:2) ಎಂಬ ಪ್ರವಾದನೆಯಿಂದ ಅಂತ್ಯಗೊಳಿಸೋಣ. ದೇವರು ತನ್ನ ಕಾಲವನ್ನು ಹೊಂದಿದ್ದನು (ಗಲಾತ್ಯ 4:4). ಆದರೆ ಜನರ ಹೃದಯಗಳು ಇನ್ನೂ ಒಣ ನೆಲದ ಬೇರಿನಂತಿದೆ. ಈ ಪರಿಸ್ಥಿತಿ ಇದ್ದರೂ, ಯೇಸು ಪುನಃ ಬರುವವನಾಗಿದ್ದಾನೆ. ಅಂತಿಮವಾಗಿ ಯೇಸುವಿನ ಧರ್ಮವು ಲೋಕದಲ್ಲೆಲ್ಲಾ ಪ್ರಸರಿಸುವದು.

---

ಟಿಪ್ಪಣೆಗಳು

[1]B. S. Dean, "An Outline of New Testament History," *Truth for Today* (March 1992): 6. [2]ಇತರ ಯೆಹೂದ್ಯರು ತಿರಿಗಿ ಬರಲು ತನ್ನ ಚದರಿಹೋದ ದೇಶಗಳಲ್ಲಿ ವಾಸಿಸಿದರು. ಇವರನ್ನು "ಚದರಿಸಲ್ಪಟವರು" ಎಂದು ಕರೆಯುವರು (ಯೋಹಾನ 7:35; ನೋಡಿ ಯಾಕೋಬ 1:1). [3]ಹಳೆ ಒಡಂಬಡಿಕೆಯು ಕೊನೆಯ ಪುಸ್ತಕವು ಕ್ರಿ.ಪೂ. 430-425ರಲ್ಲಿ ಬರೆಯಲ್ಪಟ್ಟಿದೆ. ಹೊಸ ಒಡಂಬಡಿಕೆಯ ಮೊದಲ ಸಂಬಂಧ-ಸ್ನಾನೀಕನಾದ ಯೋಹಾನನ ಜನನಕ್ಕೆ ಸಂಬಂಧಿಸಿದ್ದು. ಕ್ರಿ.ಪೂ. 5ರಲ್ಲಿ ಸಂಭವಿಸಿದೆ. ಈ ರೀತಿಯಲ್ಲಿ ಈ ಎರಡರ ಮಧ್ಯಕಾಲದಲ್ಲಿ 400ಕ್ಕಿಂತ ಸ್ವಲ್ಪ ಹೆಚ್ಚಿನ ವರ್ಷಗಳು. [4]Smith ನ ಮೂರು ಅವಕಾಶಗಳನ್ನು ಹುಡುಕಿ ಉಪಯೋಹಿಸಲಾಗಿದೆ. (F. LaGard Smith, *The Narrated Bible in Chronological Order* [Eugene, Oreg.: Harvest House Publishers, 1984], 1338-39). [5]ಅವು ಹಳೆ ಒಡಂಬಡಿಕೆಯ "ಪ್ರಾಮಾಣಿಕ" ಗ್ರಂಥದಲ್ಲಿ ಸೇರಿಸಿಲ್ಲ (ಕೂಡಿಸಿಲ್ಲ) ಹಳೆ ಒಡಂಬಡಿಕೆಯ ರಚನೆಗಳು (ಪುಸ್ತಕಗಳು) ದೈವ ಪ್ರೇರಿತವಾಗಿವೆ ಎಂದು ಗುರುತಿಸಲ್ಪಟ್ಟಿವೆ. [6]ಹಳೆ ಒಡಂಬಡಿಕೆ ರಚನೆಗಳಿಂದ ಕರ್ತನಾದ ಯೇಸುವನ್ನು, ಆತನ ಅಪೊಸ್ತಲರನ್ನು ನಂತರವಾಗಿ ಎತ್ತಿ ತೋರಿಸಿದರಾದರು, ಅಪೋಕ್ರಪನಿಂದ ಯಾರು ಎತ್ತಿ ತೋರಿಸಲಿಲ್ಲ. [7]Josephus ಬರೆದ ಇನ್ನು ಎರಡು ಪುಸ್ತಕಗಳಿವೆ. *Against Apion* and *Autobiography,* ಇವುಗಳಿಂದ ನಮಗೆ ಪ್ರಯೋಜನಕರವಿಲ್ಲ (ಪ್ರಾಮುಖ್ಯತೆ ಇಲ್ಲ). [8]ಪ್ರವಚನ ಸಂಬಂಧವಾದ ಕಂತೆ ಇನ್ನು ಇತರ ವಿವರಗಳು ಸಂಕ ಇವೆ. ರೋಮಾ ಸಾಮ್ರಾಜ್ಯದ ಬಲಹೀನತೆಯಂತೆ ಇವೆ. ನಮಗೆ ಪ್ರವಚನದಲ್ಲಿ ಪ್ರಮುಖವಾದ ಸಂಗತಿ - ದೇವರು ತನ್ನ ರಾಜ್ಯವನ್ನು ಸ್ಥಾಪಿಸುತ್ತಾನೆ ಎಂಬುದೇ (ದಾನಿಯೇಲ 2:44) - ಆ ವಾಗ್ದಾನವು

ಸಭೆ ಸ್ಥಾಪಿಸಲ್ಪಟ್ಟದ್ದರಿಂದ ನೇರವೇರಿದೆ. ಆದರೆ ಪ್ರವಚನೆ ಮಾಡಲ್ಪಟ್ಟ ನಾಲ್ಕು ರಾಜ್ಯಗಳ ಮೇಲೆ ನಮ್ಮ ದೃಷ್ಟಿ ಇಡೋಣ. [9]ಮೇಧ್ಯ ಹಾಗೂ ಪರ್ಶಿಯನ್ನರ ಐಕ್ಯ ಕೋಟವು ಲೋಕವನ್ನು ಜಯಿಸಿತ್ತು. ಆದ್ದರಿಂದ ಇದನ್ನು ಮೇದ್ಯ ಮತ್ತು ಪರ್ಶಿಯನ್ನರ ರಾಜ್ಯವೆಂದು ಕರೆದರು. ಮತ್ತೊಂದು ಕಡೆ ಪರ್ಶಿಯನ್ ದೇಶವು ಆರ್ಥಿಕ ಪ್ರಭಾವವನ್ನು ತೋರ್ಪಡಿಸಿದ್ದರಿಂದ ಇದನ್ನು "ಪರ್ಶಿಯನ್" ಸಾಮ್ರಾಜ್ಯವೆಂದು ಸಹ ಕರೆಯುತ್ತಾರೆ. ಆದ್ದರಿಂದ ಕೆಲವು ಸಾರಿ ನಾನು ಪರ್ಶಿಯನ್ನರ ಆಳ್ವಿಕೆ ಎನ್ನುವೆನು. [10]ಸಾವತ್ಸರಗಳ ಸೂಚನೆ ಕೇವಲ ಉಪದೇಶಗಳಿಂದ ಹೇಳಲಾಗಿತ್ತು. ಅವು ಪರಿಪೂರ್ಣವಾದವುಗಳಲ್ಲ. ಆತನ ಕಾಲಗಳಿಗೆ ಸಂಬಂಧಿಸಿ ಕೊಡಲ್ಪಟ್ಟ ಕಾಲಗಳು ಪಾಲೇಸ್ಟೀನ್ ಆಳ್ವಿಕೆ ಮಾತ್ರ ಸೂಚಿಸಲ್ಪಟ್ಟಿವೆ.


[11]ಇದನ್ನು "ಮಾಸಿದೋನಿಯರ ಕಾಲವೆಂದು" ಸಹ ಅನ್ನುವರು. ಮಹಾ ಅಲೆಗ್ಜಾಂಡರ್ ಮಾನಿದೋನಿಯದವನು. ಆದುದರಿಂದ, ದಾನೀಯೇಲ 8:21 ಗ್ರೀಸ್ ಅನ್ನುವ ಪದವನ್ನು ಉಪಯೋಗಿಸುತ್ತದೆ. ಅದನ್ನೇ ನಾವು ಇಲ್ಲಿ ಉಪಯೋಗಿಸುತ್ತೇವೆ. [12]*Koine* ಗ್ರೀಕ್ ಎನ್ನುವುದು ಆ ದಿನಗಳ ಸಾಮಾನ್ಯ ಮನುಷ್ಯನು ಮಾತಾಡುವ ಗ್ರೀಕ್ ಭಾಷೆ. [13]ಮಹಾ ಅಲೆಕ್ಸಾಂಧ್ರನ ಸಾಮ್ರಾಜ್ಯವು ನಾಲ್ಕು ಭಾಗಗಳಾಗಿ ಹೊಡೆದು ಹೋಗುತ್ತದೆ ಎಂದು ದಾನಿಯೇಲ 8:8, 21, 22 ರಲ್ಲಿ ಪ್ರವಚಿಸಲಾಗಿದೆ. [14]"Ptolemies" ಎನ್ನುವ ಹೆಸರು ಐಗುಪ್ತವನ್ನು ವಶಪಡಿಸಿಕೊಂಡ ಸೇನಾಧಿಪತಿಯ ಹೆಸರಿಂದ ಬಂದಿದೆ. [15]ಸಿರಿಯವನ್ನು ವಶಪಡಿಸಿಕೊಂಡ ಸೆಲ್ಯೂಕಸ್‌ನಿಂದ "Seleucids" ಅನ್ನುವ ಹೆಸರಿ ಬಂತು. [16]"ಪಾಲೇಸ್ಟಿನಿಯರ" ಕ್ರೈಸ್ತ ಜೀವಿತದ ಭೂಪಟವನ್ನು ನೋಡಿರಿ. [17]ಸ್ಮಿತ್ 1346ರಲ್ಲಿ, ದಾನಿಯೇಲನಲ್ಲಿನ ಅನೇಕ ಪ್ರವಚನೆಗಳು ಅಂತಿಯೋಕಸ್, ಎಪಿನಾಸ್‌ನ ಕ್ರೂರವಾದ ಆಳ್ವಿಕೆಯನ್ನು ಸೂಚಿಸುವುದಾಗಿ ಸಾಧಾರಣವಾದ ಅಂಗಿಕಾರವಿದೆ (ಉದಾಹರಣೆ ದಾನಿಯೇಲ 8:9-11). [18]ಯೆಹೂದ್ಯರಿಗೆ ಹತ್ತು ಅಪವಿತ್ರವಾದ ಪ್ರಾಣಿಗಳು (ಯಾಜಕಕಾಂಡ 11:3, 7). [19]ಇದನ್ನು ಆಸ್ಮೋನಿಯನ್ (ಹಸ್‌ಮೋನಿಯನ್) ಕಾಲವೆಂದು ಸಹ ಕರೆಯುವರು. [20]ಪ್ರಧಾನ ಯಾಜಕನಾದ ಆರೋನನ ಸಂತತಿಯವನಾಗಿರಬೇಕು. ಮೋಶೆ ಹೇಳಿದನು (ವಿಮೋಚನಕಾಂಡ 29:9; ಅರಣ್ಯಕಾಂಡ 25:10-13). ಜೇಷ್ಠ ಕುಮಾರನಾಗಿರಬೇಕು. ಆದರೆ ಮೋಶೆ ಮಾತುಗಳು ನಿರ್ಲಕ್ಷೆ ಮಾಡಲ್ಪಟ್ಟವೆಂದು ಕಾಣುತ್ತದೆ.

[21]ಕ್ರಿ.ಶ. 70ರಲ್ಲಿ ರೋಮಾಯರು ಯೊಸಲೇಮನ್ನು ನಾಶಮಾಡಿದರು. [22]ಆ ಕಾಲದಲ್ಲಿ ರೋಮಾ ಸಾಮ್ರಾಜ್ಯವು ಪಾಂಪೆ, ಜೂಲಿಯಸ್ ಸಿಜರ್‌ನು ಸೇರಿ ಪರಿಪಾಲಿಸಲಾಗುತ್ತಿತ್ತು. ಕೊನೆಗೆ ಜೂಲಿಯಸ್ ಸಿಜರ್‌ನು ವಶಪಡಿಸಿಕೊಂಡನು. [23]"ಪಾಲೇಸ್ಟಿನಿಯರ" ಕ್ರೈಸ್ತ ಜೀವಿತದ ಭೂಪಟವನ್ನು ನೋಡಿರಿ. [24]"ಬಾಶಾನ್" ಎಂಬ ಭಾಷೆಯನ್ನು ನಿರಂತರವಾಗಿ ಹಳೆ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲಾಗಿದೆ (ಯೆಹೋಶುವ 22:7; 1 ಪೂರ್ವಕಾಲವೃತ್ತಾಂತ 6:71; ಯೆಶಾಯ 33:9). ಆದರೆ ಹೊಸ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಿಲ್ಲ. [25]"ಪಾಲೇಸ್ಟಿನಿಯರ ಕ್ರೈಸ್ತ ಜೀವಿತದ ಭೂಪಟವನ್ನು ನೋಡಿರಿ." [26]"ಕೈಸೇರನ" ಮುದ್ರೆಯುಳ್ಳ ನಾಣ್ಯಗಳು ಜಾರಿಯಲ್ಲಿದ್ದವು (ಮತ್ತಾಯ 22:20), ರೋಮಕ್ಕೆ ತಮ್ಮ ಸುಂಕವನ್ನು ಕಟ್ಟುಲಲ್ಲಿ ಬಿಟ್ಟು, ಯೆಹೂದರ "ಶಾಪಗ್ರಸ್ತವಾದ ನಾಣ್ಯಗಳನ್ನು" ಅವರು ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲ. [27]"ಪಾಲೆಸ್ಟೇನ್" ಅನ್ನು ಹೆಸರು "ಪಿಲಿಷ್ಟಿ"ಯಿಂದ ಬಂದಿದ್ದು, ಕಾನಾನಿಗೆ ದಕ್ಷಿಣ ತೀರದಲ್ಲಿ ಪಿಲಿಷ್ಟಿಯರು ನಿವಾಸಿದ್ದರು (ಚೆಪನ್ಸ್ 2:5). ಮೆಕ್ಕೊಬ್ಬಯರು ಪಿಲಿಷ್ಟಿಯರೊಂದಿಗೆ ಯುದ್ಧ ಮಾಡಿದ್ದರು. ಆದರೆ ಪಿಲಿಷಿಯರ ಹೆಸರು ಹೊಸ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಿಲ್ಲ. ಅವರು ಯೆಹೂದ್ಯ ದೇಶದಲ್ಲಿ ಕಲಿಸಿ (ಬೆರೆತು) ಹೋದರೆಂದು ಕೆಲವರು ಭಾವಿಸುತ್ತಾರೆ. [28]ಹಳೆ ಒಡಂಬಡಿಕೆಯ KJVಯಲ್ಲಿ, ಒಂದು ಸಾರಿ "Palestine" ಅನ್ನುವ ಹೆಸರು ಯೋವೆಲ 3:4ರಲ್ಲಿ ಕಾಣಿಸುತ್ತದೆ. NASB ಅದನ್ನು "ಫಿಲಿಷ್ಟಿಯ" ಎಂದು ಭಾಷಾಂತರ ಮಾಡಲಾಗಿದೆ. [29]John D. Davis, "Palestine," *A Dictionary of the Bible,* 4th ed. (Grand Rapids, Mich.: Baker Book House, 1956), 562. [30]ಪಾಲೇಸ್ತೀನ್ ಅಳತೆಯನ್ನು ನಿಮ್ಮ ಪ್ರಾಂತ್ಯದ ರಾಷ್ಟ್ರಗಳೊಂದಿಗೆ ಹೋಲಿಸಿ ನೋಡಿ ಹಾಗೆ ಪಾಲೇಸ್ಟೀನ್ ಎಷ್ಟು ಚಿಕ್ಕದೆಂದು ಇತರರಿಗೆ ಅರ್ಥವಾಗುತ್ತದೆ.

[31]ಟಿಪ್ಪಣಿ 24ನ್ನು ನೋಡಿರಿ. [32]ಆ ಪ್ರಾಂತ್ಯದಲ್ಲಿ ಹತ್ತಕ್ಕಿಂತ ಹೆಚ್ಚಿನ ಪಟ್ಟಣಗಳಿವೆ. ಆದರೆ ಹತ್ತು ಪಟ್ಟಣಗಳು ಮಾತ್ರ ಪ್ರಮುಖವೆಂದು ವರ್ಣಿಸಲ್ಪಟ್ಟಿರಬಹುದು. [33]ದೇವಾಲಯವು ಕ್ರಿ.ಶ. 60ರವರೆಗೆ ಪೂರ್ತಿಮಾಡಲಾಗಲಿಲ್ಲ. ರೋಮಾ ಸೈನ್ಯದಿಂದ ಕ್ರಿ.ಶ. 70ರಲ್ಲಿ ಕೆಲವು ವರ್ಷದಲ್ಲೇ ಅದು ನಾಶಮಾಡಲ್ಪಟ್ಟಿತ್ತು. ಆ ಸಮಯಕ್ಕೆ ನಿರ್ಮಾಣ ಕಾರ್ಯಕ್ರಮ ಇನ್ನೂ ಮುಗಿದಿಲ್ಲವೆಂದು ಕೆಲವರು ನಂಬುತ್ತಾರೆ. [34]ಹಬ್ಬಗಳ ಕುರಿತ ನಕ್ಷೆಯನ್ನು ನೋಡಿ, ತೂತ್ತುರಿಯ ಹಬ್ಬ, ಪೂರ್ಣಿಮ ಹಬ್ಬ ಇವುಗಳನ್ನು ಬಿಟ್ಟು ಊಳಿದ ಹಬ್ಬಗಳೆಲ್ಲ ಹೊಸ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. [35]"ಮಂದಿರ" ಅಂದರೆ ಕಟ್ಟಡವಾಗಿರದೆ "ಮಂದೆಯಾಗಿದೆ." ಅವರು ಕೊಡುವ ಕಟ್ಟಡವನ್ನು ಅಲ್ಲದೆ, ಜನರನ್ನು

ಸೂಚಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ ಜನರು ಕ್ರಮವಾಗಿ ಕೊಡುವ ಸ್ಥಳಕ್ಕೆ ಆ ಮಾತನ್ನು ಸೂಚಿಸಿರಬಹುದು - ಸಾಮಾಜ ಮಂದಿರ (ಸಭಾ ಮಂದಿರ) (ಲೂಕ 7:5 ನೋಡಿ). [36]ಸಮಾಜ ಮಂದಿರವನ್ನು ಕುರಿತು ಹೆಚ್ಚಾಗಿ ಮುಂದೆ ಮಾತಾಡೋಣ ಉದಾಹರಣೆ - ಅವರ ನಾಯಕರು ಹಿರಿಯರೆಂದು ಕರೆಯಲ್ಪಟ್ಟರು. ಸುವಾರ್ತೆ ರಚನೆಯಲ್ಲಿ "ಹಿರಿಯರು" ಅಂದರೆ ಸಮಾಜ ಮಂದಿರದ ನಾಯಕರೇ (ಲೂಕ 7:3-5) ಕೆಲವು ಸಾರಿ ಮತ ಸಂಬಂಧವಾದ ಇತರ ನಾಯಕರನ್ನು ಸೂಚಿಸುತ್ತದೆ. [37]"ರಬ್ಬಿ" ಎಂಬುದು ಒಂದು ಇಬ್ರಿಯ ಪದ, "ಗುರು" ಎಂದು ಅರ್ಥ. "ನನ್ನ ಬೋಧಕ" ಎಂಬ ಅರ್ಥವು ಉಂಟು ("ರಬ್ಬುನಿ" ಎಂಬುದು "ರಬ್ಬಿ" ಎನ್ನುವ ಪದಕ್ಕೆ ಬದಲಾವಣೆ; ಯೋಹಾನ 20:16ರಲ್ಲಿ ನೋಡಿ) ಗೌರವ ಸೂಚನೆಗೆ, ಶಿಷ್ಯರು ಕರ್ತನಾದ ಯೇಸುವನ್ನು "ರಬ್ಬಿ" (ಮತ್ತಾಯ 26:25; ಮಾರ್ಕ 9:5; ಯೋಹಾನ 3:2) ಎಂದು ಕರೆದರು. [38]ಈ ವಾಕ್ಯನಗಳನ್ನು "ತಲ್‌ಮುದ್" ಎನ್ನುವುದು ಗ್ರಂಥವಾಗಿ ಕಾಲಕ್ರಮದಲ್ಲಿ ಹೊಂದಿ ಮಾಡಲ್ಪಟ್ಟಿವೆ. [39]2ನೇ ಸಮುವೇಲ 8:17 ನೋಡಿ ("ಲೇಖಕನೆಂದು" NASB ಯಲ್ಲಿ ಭಾಷಾಂತರ ಮಾಡಲಾಗಿದೆ. KJV ಯನ್ನು ನೋಡಿ). [40]ಧರ್ಮಶಾಸ್ತ್ರ ಉಪದೇಶಕರನ್ನು "ಡಾಕ್ಟರ್" (ವೈದ್ಯರು) ಎನ್ನುವ ಪದದಲ್ಲಿ KJV ಕೆಲವು ಸಾರಿ ಸೂಚಿಸುತ್ತಿದೆ (ಲೂಕ 2:46; 5:17).

[41]ದೇವರಿಂದ ದೇವರ ಸಂದೇಶದೊಂದಿಗೆ ಯೋಹಾನನು ಕಳುಹಿಸಲ್ಪಟ್ಟನೆಂದು ಹೊಸ ಒಡಂಬಡಿಕೆ ಬೋಧಿಸುತ್ತದೆ (ಯೋಹಾನ 1:6; ಲೂಕ 3:2). ಮತ್ತು ಬೋಧನೆಯನ್ನು ಆಚರಣೆಯಲ್ಲಿ ಯೋಹಾನನು ಹೋಲಿಸಿದರೆ ವ್ಯತ್ಯಾಸಗಳು ಕಾಣಿಸುತ್ತವೆ. [42]ಆತನು ಹೋದ ನಂತರ ಸಂಭವಿಸುತ್ತವೆ ಎಂದು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದನು (ಮತ್ತಾಯ 24:5, 23, 24). ಆತನ ಜನ್ಮಕ್ಕೆ ಹಿಂದೆ ಸಹ ಇಂತಹ ಸಂಘಟನೆಗಳು ಸಂಭವಿಸಿದವೆಂದು ಹೆಚ್ಚಿನ ಪಂಡಿತರು ನಂಬುತ್ತಾರೆ. ಅಪೊಸ್ತಲರ ಕೃತ್ಯಗಳು 5:36, 37 ಇಬ್ಬರು ನಟನೆ ಮಾಡಿರುವರನ್ನು ಕುರಿತು ಹೇಳುತ್ತದೆ.


ಕ್ರಿಸ್ತನ ಜೀವನ ಕಾಲದಲ್ಲಿದ್ದ
ಪಾಲಿಸ್ತೇನ್
ಸಿರಿಯಾ
ಅಭಿಲೇನ್
ತ್ರಕೋನಾಯ
ಸಿದೋನ
ಇತುರಾಯ
ತೈರ
ಬಸಾನ್
ಜಿಲ್ಲೆ
ಗಲಿಲಾಯ
ಬೆತೆಸ್ಥ
ಕಪೆರ್ನೌಮ್
ಗಲಿಲಾಯದ
ಸಮುದ್ರ
ಕಾನಾ?
ನಜರೇತ್
ಟಾಬಾರ್
ಪರ್ವತ
ದೆಕಪೋಲಿ
ಐನೋನು?
ಸಮಾರ್ಯ
ಪೆರಿಯಾ
ಪಿಲಿಷ್ಟಿಯರು
ವಾಸಿಸಿದ್ದು
ಬೇಥಾನ್ಯ
ಯೋರ್ದನ
ಹೊಳೆಯ ಆಚೆ?
ಯೆರೂಸಲೇಮ
ಬೆತ್ಲೆಹೇಮ
ಯುದಾಯ
ಮೃತ
ಸಮುದ್ರ
ಈಜಿಪ್ಟ್
ಬೆರ್ಷೆಬಾ

## ಯೆಹೂದ್ಯರ ಹಬ್ಬಗಳು[1]

| ಹಬ್ಬದ ಹೆಸರು | ನಾಮಾಂಕಿತ | ಆಚರಣೆಯ ತಿಂಗಳು | ಪರಿಶುದ್ಧ ವರ್ಷದ ತಿಂಗಳು | ಸಾರ್ವಜನಿಕ ವರ್ಷದ ತಿಂಗಳು | ಇಂಗ್ಲೀಷ್ ತಿಂಗಳು | ಹಬ್ಬದ ಕಾಲವಧಿ | ಆಚರಣೆ ಸ್ಥಳ | ಆಚರಣೆಯ ಪ್ರಮುಖ ಗುರಿ | ಆಚರಣೆಯ ಸೂಚನೆ | ಇತರೆ ಹೆಸರುಗಳು |
|---|---|---|---|---|---|---|---|---|---|---|
| ಪಸ್ಕ | ಮಹಾ ಹಬ್ಬ | ನಿಸಾನ್ ಅಥವಾ ಅಬಿಬ್ | 1 | 7 | ಎಪ್ರಿಲ್ | 1 ವಾರ | ಯೆರೂಸಲೇಮ್ | ಕುರಿಮರಿಯ ಬೋಜನ | ಮರಣದಿಂದ ಪಾರಾಗಿ ಮತ್ತು ಐಗುಪ್ತದಿಂದ ವಿಮೋಚನೆ | ಹುಳಿಯಿಲ್ಲದ ರೊಟ್ಟಿ |
| ಪಂಚಾ ಶತ್ತಮ | ಮಹಾ ಹಬ್ಬ | ಸಿವಾನ್ | 3 | 9 | ಜೂನ್ | 1 ದಿನ | ಯೆರೂಸಲೇಮ್ | ಎರಡು ರೊಟ್ಟಿಗಳ ಸಮರ್ಪಣೆ, ಗೋಧಿ ಪ್ರಥಮ ಸುಗ್ಗಿ | ಸಿನಾಯಿ ಬೆಟ್ಟದಲ್ಲಿ ಕಟ್ಟಳೇಗಳು ಕೊಡಲ್ಪಟ್ಟಿತು | ವಾರಗಳು; ಮೊದಲ ಫಲ; ಹಾಗೂ ಗೋದಿಯ ಸುಗ್ಗಿ |
| ಪರ್ಣ ಶಾಲೆಗಳ ಹಬ್ಬ | ಮಹಾ ಹಬ್ಬ | ತೀಸ್ರಿ ಅಥವಾ ಇತಾನಿಮ್ | 7 | 1 | ಅಕ್ಟೋಬರ್ | 1 ವಾರ | ಯೆರೂಸಲೇಮ್ | ಪರ್ಣಶಾಲೆಗಳಲ್ಲಿ ವಾಸಿಸುವದು | ಅರಣ್ಯದ ವಾಸ | ಒಟ್ಟಾಗಿ ಸೇರುವದು |

| ಹಬ್ಬದ ಹೆಸರು | ನಾಮಾಂಕಿತ | ಆಚರಣೆಯ ತಿಂಗಳು | ಪರಿಶುದ್ಧ ವರ್ಷದ ತಿಂಗಳು | ಸಾರ್ವಜನಿಕ ವರ್ಷದ ತಿಂಗಳು | ಇಂಗ್ಲೀಷ್ ತಿಂಗಳು | ಹಬ್ಬದ ಕಾಲವಧಿ | ಆಚರಣೆ ಸ್ಥಳ | ಆಚರಣೆಯ ಪ್ರಮುಖ ಗುರಿ | ಆಚರಣೆಯ ಸೂಚನೆ | ಇತರೆ ಹೆಸರುಗಳು |
|---|---|---|---|---|---|---|---|---|---|---|
| ತುತ್ತೂರಿ ಹಬ್ಬ | ಚಿಕ್ಕ ಹಬ್ಬ | ತೀಸ್ರಿ ಅಥವಾ ಇತಾನಿಮ್ | 7 | 1 | ಅಕ್ಟೋಬರ್ | 1 ದಿನ | ಎಲ್ಲಿಯಾದರೂ | ತುತ್ತೂರಿ ಊದುವದು | ಹೊಸ ವರ್ಷದ ದಿನದಂದು | |
| ಸಮರ್ಪಣೆಯ ಹಬ್ಬ | ಚಿಕ್ಕ ಹಬ್ಬ | ಚಿಸ್‌ಲಿಯ | 9 | 3 | ಡಿಸೆಂಬರ್ | 8 ದಿನಗಳು | ಎಲ್ಲಿಯಾದರೂ | ಸಂತೋಷ ಪಡುವದು, ಹಾಡುವದು, ದೀಪ ಹಾಗೂ ದೀವಟಿಗೆಗಳನ್ನು ಹಚ್ಚುವದು | ಅನ್ಯರಿಂದ ಹಿಂದಕ್ಕೆ ಪಡೆದ ನಂತರ ದೇವಾ ಲಯದ ಪುನ ಪ್ರತಿಷ್ಟೆ ಮಾಡುವದು | ದೀಪಗಳು |
| ಪೂರಿಮ್ | ಚಿಕ್ಕ ಹಬ್ಬ | ಅದಾರ್ | 12 | 6 | ಮಾರ್ಚ್ | 2 ದಿನಗಳು | ಎಲ್ಲಿಯಾದರೂ | ಎಸ್ತೆರಳ ಪುಸ್ತಕದ ಪಠನಾ | ಎಸ್ತೇರ್ ರಾಣಿಯು ಯೆಹೂದ್ಯರನ್ನು ಬಿಡಿಸಿದು | |